# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಆಗಸ್ಟ್ 07, 2024

ಸಂಪುಟ : 51 ಸಂಚಿಕೆ : 85 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಸಿಎಂ ವಿರುದ್ಧ ಡಿನೋಟಿಫೈ ಆರೋಪ



ಬೆಂಗಳೂರು, ಆ. 6 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಈ ಹಿಂದೆ ಡಿ-ನೋಟಿಫೈ ಮಾಡಿಸಿರುವ ಆರೋಪ ರಾಜಭವನದ ಅಂಗಳಕ್ಕೆ ತಲುಪಿದೆ.

ಈ ಪ್ರಾಧಿಕಾರದ ವತಿಯಿಂದಲೇ ಮುಖ್ಯಮಂತ್ರಿ ಅವರು ತಮ್ಮ ಕುಟುಂಬಕ್ಕೆ ಕೋಟ್ಯಂತರ ರೂ. ಬೆಲೆ ಬಾಳುವ ಬಿಡಿ ನಿವೇಶನಗಳನ್ನು ಪಡೆದ್ದಾರೆ ಎಂಬ ಎರಡು ಪ್ರತ್ಯೇಕ ದೂರುಗಳು ದಾಖಲಾಗಿ ರಾಜ್ಯಪಾಲರು, ಮುಖ್ಯಮಂತ್ರಿ ಅವರಿಂದ ವಿವರಣೆ ಕೇಳಿದ ಬೆನ್ನಲ್ಲೇ ಮತ್ತೊಂದು ದೂರು ದಾಖಲಾಗಿದೆ.

ಡಿ-ನೋಟಿಫಿಕೇಶನ್ ಪ್ರಕರಣಕ್ಕೆ ಸಂಬಂಧಿ ಸಿದಂತೆ ತಮ್ಮ ವಿರುದ್ಧ ದೂರು ಸಲ್ಲಿಸುತ್ತಾರೆಂಬ ಮಾಹಿತಿ ಬರುತ್ತಿದ್ದಂತೆ ಮುಖ್ಯಮಂತ್ರಿ ಅವರು ಇಂದು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗೊಳ್ಳಲಿದ್ದ ಮೂರು ದಿನದ ಪ್ರವಾಸ ರದ್ದು ಮಾಡಿ, ಸೋಮವಾರ ರಾತ್ರಿಯೇ ದಿಢೀರನೆ ಮೈಸೂರಿಗೆ ತೆರಳಿದ್ದರು.

ಮೈಸೂರು ತಾಲ್ಲೂಕು ವರು ಣಾದ ಉತ್ತನಹಳ್ಳಿಯಲ್ಲಿ ಆಶ್ರಯ ಮನೆಗಳಿಗಾಗಿ ಭೂಸ್ವಾಧೀನ ಮಾಡಿದ್ದ ಜಮೀನನ್ನು ಮೂವತ್ತು ವರ್ಷದ ಬಳಿಕ ಡಿ-ನೋಟಿಫೈ ಮಾಡುವಂತೆ ಸಿದ್ದರಾಮಯ್ಯ ಪತ್ರ ಬರೆದಿದ್ದರು ಎನ್ನುವುದೇ ಗುರುತರ ಆರೋಪ.

ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಎಂಬುವರು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆ ಸಮೇತ ರಾಜ್ಯಪಾಲರಿಗೆ ಇಂದು ದೂರು ನೀಡಿದ್ದಾರೆ.

ಮರಪ್ಪ ಎಂಬುವರ ಹೆಸರಿಗೆ 1.39 ಎಕರೆ ಜಮೀನು ಡಿ-ನೋಟಿಫೈ ಮಾಡುವಂತೆ ಸಿದ್ದರಾಮಯ್ಯ ಶಿಫಾರಸ್ಸು ಮಾಡಿದ್ದರು.

ಈ ಜಮೀನಿಗೂ ಮರಪ್ಪ ಎಂಬುವವರಿಗೂ ಯಾವುದೇ ಸಂಬಂಧ ಇಲ್ಲ, ನಕಲಿ ದಾಖಲೆ ಸೃಷ್ಟಿಸಿ ನಂತರ ಅವರ ಹೆಸರಿನಲ್ಲಿ ಡಿ-ನೋಟಿಫೈ ಮಾಡಲಾಗಿದೆ.

ಸಿದ್ದರಾಮಯ್ಯ ಅವರ ಪತ್ರ ಆಧರಿಸಿ 14 ತಿಂಗಳ ಬಳಿಕ 1.39 ಎಕರೆಯನ್ನು ಅಂದಿನ ಮೈಸೂರು ಜಿಲ್ಲಾಧಿಕಾರಿ ಅವರು ಡಿ-ನೋಟಿಫೈ ಮಾಡಿದ್ದಾರೆ.

ನಕಲಿ ದಾಖಲೆ ಆಧಾರದ ಮೇಲೆ ವಾರಸುದಾರರಲ್ಲದವರಿಗೆ ಡಿ-ನೋಟಿಫೈ ಮಾಡಿಸುವಲ್ಲಿ ಸಿದ್ದರಾಮಯ್ಯ ಭಾಗಿಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೂರುದಾರರು ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ.

## ವರಮಹಾಲಕ್ಷ್ಮಿ ಹಬ್ಬಕ್ಕೆ ಗೃಹಲಕ್ಷ್ಮಿ ಹಣ

### ಕಂತುಗಳಲ್ಲಿ ಹಣ ಬಿಡುಗಡೆ ಮಾಡಲು ಕ್ರಮ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್

ಬೆಂಗಳೂರು, ಆ. 6 - ವರಮಹಾಲಕ್ಷ್ಮಿ ಹಬ್ಬಕ್ಕೆ ರಾಜ್ಯದ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಎರಡು ತಿಂಗಳ ಹಣ ಜಮೆ ಆಗಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಇಂದಿಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು, ತಾಂತ್ರಿಕ ಕಾರಣಗಳಿಂದ ಕಳೆದ ಎರಡು-ಮೂರು ತಿಂಗಳಿಂದ ಗೃಹಲಕ್ಷ್ಮಿ ಯೋಜನೆಯ ಮಾಸಿಕ ತಲಾ 2000 ರೂ. ಸಹಾಯಧನ ಮನೆಯೊಡತಿಯ ಬ್ಯಾಂಕ್ ಖಾತೆಗೆ ಜಮೆ ಆಗಿರಲಿಲ್ಲ, ಇವತ್ತಿನಿಂದ ಜೂನ್, ಜುಲೈ ತಿಂಗಳ ಹಣ ಜಮೆ ಆಗಲಿದೆ ಎಂದು ಘೋಷಿಸಿದರು.

ಗೃಹಲಕ್ಷ್ಮಿ ಯೋಜನೆಯ ಜೂನ್ ತಿಂಗಳ ಹಣ ಬಿಡುಗಡೆ ಪ್ರಕ್ರಿಯೆ ಆರಂಭವಾಗಿದೆ, ನಾಳೆಯೊಳಗೆ 26.65 ಲಕ್ಷ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಲಿದೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ ಬೆಳಗಾವಿ, ಕಲಬುರಗಿ, ಬೀದರ್, ವಿಜಯಪುರ, ಬಳ್ಳಾರಿ, ರಾಯಚೂರು, ಗದಗ, ಬಾಗಲಕೋಟೆ, ಹಾವೇರಿ, ಕೊಪ್ಪಳ, ಯಾದಗಿರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ ಜಿಲ್ಲೆಗಳ ಫಲಾನುಭವಿಗಳಿಗೆ 533 ಕೋಟಿ ರೂ. ಪಾವತಿಯಾಗಲಿದೆ.

ಲೋಕಸಭಾ ಚುನಾವಣಾ ನೀತಿ ಸಂಹಿತೆಯಿಂದಾಗಿ ಗೃಹಲಕ್ಷ್ಮಿ ಯೋಜನೆಯ ಜೂನ್ ಮತ್ತು ಜುಲೈ ತಿಂಗಳ ಕಂತಿನ ಹಣ ತಡವಾಗಿದೆ. ಆದರೆ, ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಇತ್ತೀಚೆಗೆ ತಿಳಿಸಿದ್ದರು.

ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಹಣ ಜಮೆ ಆಗಿರಲಿಲ್ಲ. ಗೃಹಲಕ್ಷ್ಮಿ ಹಣ ಬಿಡುಗಡೆ ಮಾಡದಿರುವುದಕ್ಕೆ ವಿರೋಧ ಪಕ್ಷಗಳು ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿದ್ದವು.



ಗ್ಯಾರಂಟಿ ಭರವಸೆಗಳನ್ನು ಈಡೇರಿಸುವಲ್ಲಿ ಸರ್ಕಾರ ಆರ್ಥಿಕ ದಿವಾಳಿಯಾಗಿದೆ, ಯೋಜನೆಗಳನ್ನು ಮುಂದುವರೆಸಲು ಸಾಧ್ಯವಾಗುತ್ತಿಲ್ಲ ಎಂದು ಸರ್ಕಾರವನ್ನು ಬಿಜೆಪಿ ನಾಯಕರು ಟೀಕಿಸಿದ್ದರು.

ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ, ಸರ್ಕಾರ ಹಣ ಹೊಂದಿಸುತ್ತದೆ, ಎರಡು ತಿಂಗಳ ಹಣ ಗೃಹಲಕ್ಷ್ಮಿಯರ ಖಾತೆಗೆ ಜಮೆಯಾಗಲಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು.

## ಕುಸ್ತಿಯಲ್ಲಿ ದಾಖಲೆ ಬರೆದ ವಿನೇಶ್

ಪ್ಯಾರಿಸ್, ಆ. 6 - 50 ಕೆಜಿ ಮಹಿಳಾ ಕುಸ್ತಿ ವಿಭಾಗದಲ್ಲಿ ದಾಖಲೆ ಬರೆದಿರುವ ವಿನೇಶ್ ಫೋಗಟ್, ಒಲಂಪಿಕ್ ಪಂದ್ಯಾವಳಿಯಲ್ಲಿ ಅಂತಿಮ ಘಟ್ಟಕ್ಕೆ ತಲುಪಿರುವ ಮೊದಲ ಆಟಗಾರ್ತಿಯಾಗಿದ್ದಾರೆ. ಅಲ್ಲದೆ ಅವರು ಭಾರತಕ್ಕೆ ಕನಿಷ್ಠ ಬೆಳ್ಳಿ ಪದಕ ತರಲಿದ್ದಾರೆ.

ಸೆಮಿ ಫೈನಲ್ ಹಂತದಲ್ಲಿ ಅವರು ಕ್ಯೂಬಾದ ಯುಸ್ನೇಲಿಸ್ ಗುಸ್ಮನ್ ಲೋಪೆಜ್ ವಿರುದ್ಧ 5-0 ಅಂತರದ ಸುಲಭ ಜಯ ಗಳಿಸಿದ್ದಾರೆ.

ಉಭಯ ಕುಸ್ತಿಪಟುಗಳು ಆರಂಭದಲ್ಲಿ ಎಚ್ಚರಿಕೆಯ ಹೋರಾಟದಲ್ಲಿ ತೊಡಗಿದ್ದರು. ಮೊದಲ ಅವಧಿಯ ಅಂತ್ಯಕ್ಕೆ ವಿನೇಶ್ 1-0 ಅಂತರದಿಂದ ಮುಂದಿದ್ದರು. ಎರಡನೇ ಅವಧಿಯ ಅಂತ್ಯದಲ್ಲಿ ಅವರು ಇನ್ನೂ ನಾಲ್ಕು ಅಂಕ ಗಳಿಸುವ ಮೂಲಕ ಜಯ ತಮ್ಮದಾಗಿಸಿಕೊಂಡರು,

ಇದಕ್ಕೂ ಮುಂಚೆ ವಿನೇಶ್ ಅವರು ಎರಡು ಸ್ಮರಣಾರ್ಹ ಗೆಲುವುಗಳನ್ನು ತಮ್ಮದಾಗಿಸಿಕೊಂಡಿದ್ದರು. ಜಪಾನ್‌ನ ಹಾಲಿ ಒಲಂಪಿಕ್ ಚಾಂಪಿಯನ್ ಯೂ ಸುಸಾಕಿ ವಿರುದ್ಧ ಮತ್ತು ಉಕ್ರೇನ್‌ನ ಎಂಟನೇ ಶ್ರೇಯಾಂಕಿತೆ ಒಕ್ಸಾನಾ ಲಿವಚ್ ವಿರುದ್ಧ ಗೆದ್ದಿದ್ದರು.



2016ರ ರಿಯೋ ಹಾಗೂ 2020ರ ಟೋಕಿಯೋ ಪಂದ್ಯಾವಳಿಗಳಲ್ಲಿ ವಿನೇಶ್ ಅವರು ಕ್ವಾರ್ಟರ್ ಫೈನಲ್ ಹಂತದಲ್ಲಿ ನಿರ್ಗಮಿಸಿದ್ದರು.

### ಭಾರತಕ್ಕೆ ಕನಿಷ್ಠ ಬೆಳ್ಳಿ ಗ್ಯಾರಂಟಿ

ಒಲಂಪಿಕ್ ಪಂದ್ಯಾವಳಿಯಲ್ಲಿ ಪದಕ ಗಳಿಸುವ ವಿನೇಶ್ ಅವರ ಈ ಸಾಧನೆಯ ಹಾದಿ ಸುಲಭದ್ದಾಗಿರಲಿಲ್ಲ. ಬೆದರಿಕೆ, ಪೊಲೀಸರ ಬಂಧನ, ಅವರು ನಡೆಸುತ್ತಿದ್ದ ಪ್ರತಿಭಟನೆಯ ವಿರುದ್ಧ ಅಪಪ್ರಚಾರ ಮುಂತಾದ ಸಮಸ್ಯೆಗಳಿಗೆ ಸಿಲುಕಿದ್ದರು. ಇವೆಲ್ಲ ಸಮಸ್ಯೆಗಳ ಸುಳಿಯಿಂದ ಹೊರಬಂದ ವಿನೇಶ್, ಅತ್ಯುನ್ನತ ಕ್ರೀಡಾ ವೇದಿಕೆಯಲ್ಲಿ ಯಶೋಗಾಥೆ ಬರೆದಿದ್ದಾರೆ.

ಸವಾಲುಗಳ ನಡುವೆ ಹತಾಶೆಗೆ ಸಿಲುಕದೇ, ದಿಟ್ಟತನದ ಹೋರಾಟ ತೋರಿ ತಮ್ಮ ಟೀಕಾಕಾರರಿಗೆ ತಕ್ಕ ಉತ್ತರ ನೀಡಿದ್ದಾರೆ. (4ನೇ ಪುಟಕ್ಕೆ)

## ಪ್ರಶ್ನೆಪತ್ರಿಕೆ ಜೊತೆ ಮುದ್ರಿತ ಉತ್ತರದ ಪ್ರತಿ

### ದಾವಣಗೆರೆ ವಿವಿ ಯಡವಟ್ಟು: 'ಇ-ಕಾಮರ್ಸ್' ಪರೀಕ್ಷೆ ಮುಂದೂಡಿಕೆ

ದಾವಣಗೆರೆ, ಆ.6- ದಾವಣಗೆರೆ ವಿಶ್ವ ವಿದ್ಯಾಲಯದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಜೊತೆಗೆ ಉತ್ತರ ಮುದ್ರಿಸಿದ ಪ್ರತಿಯನ್ನು ಪರೀಕ್ಷಾರ್ಥಿಗಳಿಗೆ ವಿತರಿಸಿದ ಪ್ರಸಂಗ ಮಂಗಳವಾರ ನಡೆದಿದೆ.

ವಾಣಿಜ್ಯ ವಿಭಾಗದ ಮುಕ್ತ ಆಯ್ಕೆ (ಓಪನ್ ಎಲೆಕ್ಟಿವ್) 'ಇ-ಕಾಮರ್ಸ್' ವಿಷಯದ ಪರೀಕ್ಷೆ ಮಂಗಳವಾರ ಬೆಳಿಗ್ಗೆ 10ಕ್ಕೆ ನಿಗದಿಯಾಗಿತ್ತು. 60 ಅಂಕದ ಪ್ರಶ್ನೆಪತ್ರಿಕೆಯನ್ನು ಪರೀಕ್ಷಾರ್ಥಿಗಳಿಗೆ ವಿತರಿಸಲಾಯಿತು. ಕೆಲ ಹೊತ್ತಿನಲ್ಲಿ ಪ್ರಶ್ನೆಗಳೊಂದಿಗೆ ಉತ್ತರವೂ ಮುದ್ರಣವಾಗಿರುವುದನ್ನು ನೋಡಿ ವಿದ್ಯಾರ್ಥಿಗಳು ಕಕ್ಕಾ ಬಿಕ್ಕಿಯಾಗಿ, ಪರೀಕ್ಷಾ ಮೇಲ್ವಿಚಾರಕರ ಗಮನಕ್ಕೆ ತಂದಿದ್ದಾರೆ.




ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ 70ಕ್ಕೂ ಹೆಚ್ಚು ಕಾಲೇಜುಗಳು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿವೆ. ಇದರಲ್ಲಿ ಈ ವಿಷಯವನ್ನು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿದ್ದರು. 15 ಪರೀಕ್ಷಾ ಕೇಂದ್ರಗಳಲ್ಲಿ ಪ್ರಶ್ನೆಪತ್ರಿಕೆಯ ಜತೆಗೆ ಉತ್ತರ ಮುದ್ರಿಸಿದ ಪ್ರತಿಯನ್ನು ನೀಡಲಾಗಿತ್ತು.

ತಾಂತ್ರಿಕ ಕಾರಣಕ್ಕೆ ಪರೀಕ್ಷೆಯಲ್ಲಿ ಲೋಪ ಉಂಟಾಗಿದೆ. ಪರೀಕ್ಷೆಯನ್ನು ಮುಂದೂಡಲಾಗಿದ್ದು, ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ. ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ಸಿ. ಕೆ.ರಮೇಶ್ ತಿಳಿಸಿದ್ದಾರೆ.

## ಬ್ರಿಟನ್‌ಗೆ ತೆರಳಲಾಗದ ಹಸೀನಾ, ಸದ್ಯಕ್ಕೆ ಭಾರತದಲ್ಲೇ ನೆಲೆ

ನವದೆಹಲಿ, ಆ. 6 - ಬಾಂಗ್ಲಾದೇಶದ ಮಾಜಿ ಪ್ರಧಾನಮಂತ್ರಿ ಶೇಖ್ ಹಸೀನಾ ಅವರು ಬ್ರಿಟನ್‌ಗೆ ತೆರಳುವ ಯೋಜನೆಗೆ ಹಿನ್ನಡೆಯಾಗಿದೆ. ಮುಂದಿನ ಒಂದೆರಡು ದಿನಗಳ ಕಾಲ ಅವರು ಭಾರತದಲ್ಲಿರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಅವರು ಸೋಮವಾರ ಭಾರತಕ್ಕೆ ಬಂದಿದಿದ್ದರು. ಅವರು ಬ್ರಿಟನ್‌ಗೆ ತೆರಳಲು ಬಯಸಿದ್ದರಾದರೂ, ಸದ್ಯಕ್ಕೆ ಸಾಧ್ಯವಾಗದು ಎಂದು ಬ್ರಿಟನ್ ಸರ್ಕಾರ ಇಂಗಿತ ವ್ಯಕ್ತಪಡಿಸಿದೆ. ಇತ್ತೀಚಿನ ದಿನಗಳಲ್ಲಿ ಬಾಂಗ್ಲಾ ದೇಶದಲ್ಲಿ ತೀವ್ರ ಹಿಂಸೆಯ ಪ್ರತಿಭಟನೆಗಳು ನಡೆದಿರುವ ಹಿನ್ನೆಲೆಯಲ್ಲಿ ಹಸೀನಾ ಅವರಿಗೆ ಕಾನೂನು ರಕ್ಷಣೆ ನೀಡಲು ಸಾಧ್ಯವಾಗದು ಎಂದು (3ನೇ ಪುಟಕ್ಕೆ)

## ಆನ್‌ಲೈನ್ ವಂಚನೆ : ಬ್ಯಾಂಕ್ ಪರಿಹಾರ ಮೂರು ಪಟ್ಟು ಹೆಚ್ಚಳ

ನವದೆಹಲಿ, ಆ. 6 - ಸಾರ್ವಜನಿಕ ವಲಯದ ಬ್ಯಾಂಕುಗಳು ಆನ್‌ಲೈನ್ ವಂಚನೆಗೆ ಸಂಬಂಧಿಸಿದಂತೆ ಗ್ರಾಹಕರಿಗೆ ನೀಡುವ ಪರಿಹಾರ ಮೂರು ಪಟ್ಟು ಹೆಚ್ಚಾಗಿದೆ ಎಂದು ಸಂಸತ್ತಿಗೆ ಮಾಹಿತಿ ನೀಡಲಾಗಿದೆ.

ರಾಜ್ಯಸಭೆಯಲ್ಲಿ ಈ ಬಗ್ಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್, 2022-23ರಲ್ಲಿ ಬ್ಯಾಂಕುಗಳು 42.70 ಕೋಟಿ ರೂಪಾಯಿಗಳ ಪರಿಹಾರ ನೀಡಿದ್ದವು. . 2023 - 24ರಲ್ಲಿ ಪರಿಹಾರದ 140 ಕೋಟಿ ರೂಪಾಯಿಗಳಿಗೆ ತಲುಪಿದೆ ಎಂದು ಹೇಳಿದರು.

2023 - 24ರಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಅತಿ ಹೆಚ್ಚಿನ 74.96 ಕೋಟಿ ರೂಪಾಯಿಗಳ ಪರಿಹಾರ ನೀಡಿದೆ. ಬ್ಯಾಂಕ್ ಆಫ್ ಇಂಡಿಯಾ 20.38 ಕೋಟಿ ರೂಪಾಯಿ ಹಾಗೂ ಇಂಡಿಯನ್ ಬ್ಯಾಂಕ್ 16.16 ಕೋಟಿ ರೂಪಾಯಿಗಳ ಪರಿಹಾರ ನೀಡಿದೆ. (2ನೇ ಪುಟಕ್ಕೆ)

## 1.64 ಲಕ್ಷ ಕೋಟಿ ರೂ. ಬೆಳೆ ವಿಮೆ ಕ್ಲೇಮು ಪಾವತಿ

ನವದೆಹಲಿ, ಆ. 6 - ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಅಡಿ 32,440 ಕೋಟಿ ರೂ.ಗಳ ಕಂತು ಪಾವತಿಸಲಾಗಿದೆ ಹಾಗೂ 1.64 ಲಕ್ಷ ಕೋಟಿ ರೂ.ಗಳ ವಿಮೆ ಕ್ಲೇಮುಗಳನ್ನು ರೈತರಿಗೆ ನೀಡಲಾಗಿದ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಸಚಿವರು, 2016ರಲ್ಲಿ ಬೆಳೆ ವಿಮೆ ಯೋಜನೆಗೆ ಚಾಲನೆ ನೀಡಲಾಗಿದೆ. ಇದು ರಾಜ್ಯಗಳಿಗೆ ಸ್ವಯಂ ಪ್ರೇರಿತವಾಗಿದೆ ಎಂದರು. (3ನೇ ಪುಟಕ್ಕೆ)


## ಹೃದಯಪೂರ್ವಕ ಕೃತಜ್ಞತೆಗಳು

ರಾಜ್ಯದ ಮುಖ್ಯಮಂತ್ರಿ **ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ**
ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಕೈಗೊಂಬೆಯಂತೆ
ವರ್ತಿಸುತ್ತಿರುವ ರಾಜ್ಯಪಾಲರು ಕೈಗೊಂಡಿರುವ ಕ್ರಮದ ವಿರುದ್ಧ
ದಾವಣಗೆರೆ ಜಿಲ್ಲೆಯ ಶೋಷಿತ ವರ್ಗಗಳ ಮತ್ತು ಹಿಂದುಳಿದ ವರ್ಗಗಳ
ಮುಖಂಡರು ಹಾಗೂ ಸಿದ್ದರಾಮಯ್ಯನವರ ಅಭಿಮಾನಿಗಳು
ದಿನಾಂಕ : 5.8.2024ರ ಸೋಮವಾರ ಪ್ರತಿಭಟನೆ ನಡೆಸಿದ್ದು,
ಇದರಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ

**ಸಮಸ್ತರಿಗೂ ಕೃತಜ್ಞತೆಗಳು.**



**ದಾವಣಗೆರೆ ಜಿಲ್ಲೆಯ ಸಮಸ್ತ ಶ್ರೀ ಸಿದ್ದರಾಮಯ್ಯನವರ ಅಭಿಮಾನಿಗಳು**



## ಬಾಬುರಾವ್ ಚಿಲ್ಲಾಳ್ ನಿಧನ



ದಾವಣಗೆರೆ ವಿನೋಬನಗರ 1ನೇ ಮುಖ್ಯ ರಸ್ತೆಯ ಶ್ರೀಮತಿ ಗೌರಮ್ಮ
ನಲ್ಲೂರು ನರಹರಿ ಶೇಟ್ ಕಲ್ಯಾಣ ಮಂಟಪದ ಬಳಿಯ
ದಾವಣಗೆರೆ ಎಕ್ಸ್‌ಟೆನ್ಷನ್ ಕನ್ಸೂಮರ್ ಕೋ ಆಪರೇಟಿವ್ ಸೊಸೈಟಿ
ಮಾಲೀಕರೂ, ಸ್ವಕುಳಸಾಳಿ ಸಮಾಜದ ಮುಖಂಡರೂ ಆದ

**ಶ್ರೀ ಸಿ.ಎಂ. ಬಾಬುರಾವ್ ಚಿಲ್ಲಾಳ್**
**(ಸೊಸೈಟಿ ಬಾಬಣ್ಣ)**


ಅವರು ದಿನಾಂಕ 06-08-2024ರ ಮಂಗಳವಾರ ಸಂಜೆ 7 ಗಂಟೆಗೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು
67 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ,
ಮೊಮ್ಮಗಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 07-08-2024ರ ಬುಧವಾರ
ಮಧ್ಯಾಹ್ನ 12ರವರೆಗೆ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ 2ನೇ ಮುಖ್ಯ ರಸ್ತೆ,
2ನೇ ತಿರುವಿನಲ್ಲಿರುವ (ಬಕ್ಕೇಶ್ವರ ಸ್ಕೂಲ್ ಹಿಂಭಾಗ) ಮೃತರ ನಿವಾಸದಲ್ಲಿ
ಇಡಲಾಗುವುದು. ನಂತರ ಮಧ್ಯಾಹ್ನ 12.30ಕ್ಕೆ ಪಿ.ಬಿ. ರಸ್ತೆಯ
ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**



## ಜನ್ಮದಿನದ ಶುಭಾಶಯಗಳು




ದಿನಾಂಕ 07.08.2024ರಂದು
ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರೂ,
ಉದ್ಯಮಿಗಳೂ, ದಾವಣಗೆರೆ
ಜಿಲ್ಲಾ ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷರೂ
ನಮ್ಮ ಪ್ರೀತಿಯ ಅಣ್ಣನವರೂ ಆಗಿರುವ

**ಶ್ರೀ ಆರ್.ಹೆಚ್. ನಾಗಭೂಷಣ್**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

**ನೂತನ ಅಂಗಡಿಯ ಪ್ರಾರಂಭೋತ್ಸವ**

ದಿನಾಂಕ 9-8-2024ರ ಶುಕ್ರವಾರದಂದು
ದಾವಣಗೆರೆ ಶಾಮನೂರು ರಸ್ತೆಯಲ್ಲಿ
**ಎಸ್.ಎಸ್. ಸ್ಪಿರಿಟ್ಸ್**
**ಶುಭಾರಂಭ**

- ಚಾಮುಂಡಿ ಬಾರ್ ಅಂಡ್ ರೆಸ್ಟೋರೆಂಟ್, ಹದಡಿ ರಸ್ತೆ, ದಾವಣಗೆರೆ.
- ಆರ್.ಎಲ್. ಹೆಚ್. ರೈಸ್ ಇಂಡಸ್ಟ್ರೀಸ್, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
- ಕಾಕ್ಟೈಲ್ ವೈನ್ಸ್ MRP, ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.
- ಸ್ಪಿರಿಟ್ಸ್ ವೈನ್ ಶಾಪ್ MRP, ಶಾಮನೂರು ರಸ್ತೆ, ದಾವಣಗೆರೆ.
- ಚಾಮುಂಡಿ ಬಾರ್ ಅಂಡ್ ರೆಸ್ಟೋರೆಂಟ್, ಮಂಡಿಪೇಟೆ, ದಾವಣಗೆರೆ.
- ರಕ್ಷಿತಾ ಸ್ಟೀಲ್ಸ್ ಅಂಡ್ ಪೇಂಟ್ಸ್, ನಿಟುವಳ್ಳಿ ಮುಖ್ಯ ರಸ್ತೆ, ದಾವಣಗೆರೆ.
- ದರ್ಶನ್ ಸ್ಟೀಲ್ಸ್ ಅಂಡ್ ಸಿಮೆಂಟ್, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
- ಸಂತೋಷ್ ಬಾರ್ ಅಂಡ್ ರೆಸ್ಟೋರೆಂಟ್, ಬಸ್ ಸ್ಟ್ಯಾಂಡ್ ಹಿಂಭಾಗ, ದಾವಣಗೆರೆ.
- ಬಣ್ಣದ ಮನೆ ಅಂಡ್ ಪೇಂಟ್ಸ್, ಹದಡಿ ರಸ್ತೆ, ದಾವಣಗೆರೆ.
- ಪೂರ್ಣಿಮಾ ಬಾರ್ ಅಂಡ್ ರೆಸ್ಟೋರೆಂಟ್, ಕೆಟಿಜೆ ನಗರ, ನಿಟುವಳ್ಳಿ ರಸ್ತೆ, ದಾವಣಗೆರೆ.
- ಜೂಮ್ ವೈನ್ ಶಾಪ್ MRP, ಬಸ್ ಸ್ಟ್ಯಾಂಡ್ ಎದುರು, ಹರಿಹರ.
- ರಂಗ ಬಾರ್ ಅಂಡ್ ರೆಸ್ಟೋರೆಂಟ್, ಬೇತೂರು ರಸ್ತೆ, ದಾವಣಗೆರೆ.

# ಹರಿಹರ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣದ ಪೂಜೆ



ಹರಿಹರ,ಆ.6- ನಗರದ ಎಚ್.ಪಿ.ಚಿನ್ನಪ್ಪ ಕಾಲೋನಿಯಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ 46ನೇ ವರ್ಷದ ಶ್ರಾವಣ ಮಾಸದ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ 2ರವರೆಗೆ ಪ್ರತಿ ದಿನ ಬೆಳಿಗ್ಗೆ 7ರಿಂದ ಸ್ವಾಮಿಗೆ ಪುರೋಹಿತ ಮೃತ್ಯುಂಜಯಸ್ವಾಮಿ ವಿ. ಬೂಸನೂರುಮಠ ಇವರ ಸಹಯೋಗದಲ್ಲಿ ಮಹಾ ರುದ್ರಾಭಿಷೇಕ, 108 ಬಿಲ್ವಾರ್ಚನೆ, ಅಲಂಕಾರ ಮಹಾ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ.

**ಗುಗ್ಗಳ, ಪಲ್ಲಕ್ಕಿ ಉತ್ಸವ:** ಇದೇ ದಿನಾಂಕ 30 ರಂದು ಬೆಳಿಗ್ಗೆ 9ಕ್ಕೆ ಸ್ವಾಮಿ ಗುಗ್ಗಳ ಹಾಗೂ ಪಲ್ಲಕ್ಕಿ ಉತ್ಸವ ನಡೆಯಲಿದೆ. ಮೆರವಣಿಗೆ ನಂತರ ಅಗ್ನಿಕುಂಡ, ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ಸೇವಾ ಟ್ರಸ್ಟ್ ಮತ್ತು ಸದ್ಭಕ್ತ ಮಂಡಳಿಯ ಎಚ್.ಪಿ.ಜಗದೀಶ್ ತಿಳಿಸಿದ್ದಾರೆ.

# ಇಂದು ಶಾಲಾ ಸಂಸತ್ ಪದಗ್ರಹಣ

ದಾವಣಗೆರೆಯ ಪಿಎಲ್‌ಇ ಟ್ರಸ್ಟ್, ಜೆಎಂ ಸ್ಕೂಲ್ ಮತ್ತು ಜಿಎನ್‌ಬಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 2024-25 ನೇ ಸಾಲಿನ 'ಶಾಲಾ ಸಂಸತ್ ಪದಗ್ರಹಣ' ಹಾಗೂ 'ಕಲ್ಲ ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಡಿಡಿಪಿಐ ಜಿ.ಕೊಟ್ರೇಶ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಸದಸ್ಯರಾದ ವೀಣಾ ಬಕ್ಕೇಶ್, ಮಹಾನಗರ ಪಾಲಿಕೆ ನಾಮನಿರ್ದೇಶನ ಸದಸ್ಯ ಎಲ್.ಹೆಚ್. ಸಾಗರ್ ಅವರನ್ನು ಸನ್ಮಾನಿಸಲಾಗುವುದು ಎಂದು ಪಿಎಲ್‌ಇ ಟ್ರಸ್ಟ್ ಕಾರ್ಯದರ್ಶಿ ಕೆ.ಎಸ್. ಮಂಜುನಾಥ್ ಅಗಡಿ ತಿಳಿಸಿದ್ದಾರೆ.

# ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ ಆಹ್ವಾನ

ದಾವಣಗೆರೆ, ಆ.6 - ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿಯ ಆಲೂರು ವೃತ್ತದ ಗ್ರಾಮ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಇದೇ ದಿನಾಂಕ 20 ರೊಳಗಾಗಿ ದಾವಣಗೆರೆ ತಾಲ್ಲೂಕು ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಹಶೀಲ್ದಾರ್ ಡಾ. ಅಶ್ವತ್ಥ್ ತಿಳಿಸಿದ್ದಾರೆ.

# ನೀರು ಬಳಕೆದಾರರ ಮಹಾಮಂಡಳದಿಂದ ಭದ್ರೆಗೆ ಬಾಗಿನ



ಶಿವಮೊಗ್ಗ, ಆ.6- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಮಂಗಳವಾರ ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ವತಿಯಿಂದ ಪೂಜೆ ಸಲ್ಲಿಸಿ, ರೈತರ ಸಮ್ಮುಖದಲ್ಲಿ ಬಾಗಿನ ಅರ್ಪಿಸಲಾಯಿತು.

ಈ ವೇಳೆ ಮಾತನಾಡಿದ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ ಅವರು, ಭದ್ರೆಯ ಒಡಲು ಭರ್ತಿಯಾಗಿದ್ದರೆ ಮಾತ್ರ ಅಚ್ಚುಕಟ್ಟಿನ ರೈತರ ಹೊಟ್ಟೆ ತುಂಬುತ್ತದೆ. ಜೊತೆಗೆ ಅನೇಕ ನಗರ, ಪಟ್ಟಣಗಳಿಗೆ ಕುಡಿಯುವ ನೀರು, ಕೈಗಾರಿಕೆಗಳಿಗೆ, ಕೆರೆ-ಕಟ್ಟೆಗಳಿಗೆ ನೀರು ಪೂರೈಸುವ ಭದ್ರಾ ಜಲಾಶಯದ ಸುರಕ್ಷತೆ ಬಗ್ಗೆಯೂ ಎಲ್ಲರೂ ನಿಗಾವಹಿಸಬೇಕು. ಸರ್ಕಾರ ಕೂಡಾ ಭದ್ರಾ ಯೋಜನೆಗೆ ಅಗತ್ಯ ಅನುದಾನ ನೀಡಬೇಕೆಂದು ಮನವಿ ಮಾಡಿದರು. ಸಣ್ಣ ಕಾಲುವೆಗಳ ದುರಸ್ತಿ, ಹೊಲ ರಸ್ತೆಗಳ ಅಭಿವೃದ್ಧಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೆತ್ತಿಕೊಳ್ಳಲು ದಾವಣಗೆರೆ ಜಿಲ್ಲೆಯ ಡಿಸಿ ಮತ್ತು ಜಿ.ಪಂ. ಸಿಇಒ ಅವರು ಗ್ರಾ.ಪಂ. ಪಿಡಿಒಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕೆಂದು ಆಗ್ರಹಿಸಿದರು.

ಮಹಾಮಂಡಳದ ನಿರ್ದೇಶಕರೂ ಆದ ಡಿಸಿಸಿ ಬ್ಯಾಂಕಿನ ನಿರ್ದೇಶಕ ಮುದೇಗೌಡ್ರ ಗಿರೀಶ್ ಮಾತನಾಡಿ, ನೀರು ಬಳಕೆದಾರರ ಸಹಕಾರ ಸಂಘಗಳ ನಿರ್ವಹಣೆಗೆ ಕನಿಷ್ಠ 10 ಲಕ್ಷ ರೂ.ಗಳನ್ನು ಠೇವಣಿ ಹಣವನ್ನಾಗಿ ಸರ್ಕಾರ ನೀಡಬೇಕು. ಆ ಠೇವಣಿ ಹಣದ ಬಡ್ಡಿಯಲ್ಲಿ ಕಾರ್ಯದರ್ಶಿಗಳಿಗೆ ಸಂಬಳ ಹಾಗೂ ಕಚೇರಿ ನಿರ್ವಹಣೆ ಮಾಡಲು ಅನುಕೂಲವಾಗುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ನೀರಾವರಿ ಸಚಿವರನ್ನು ಭೇಟಿ ಮಾಡಿ, ಭದ್ರಾ ಅಚ್ಚುಕಟ್ಟಿನ ಉಪವಿಭಾಗಗಳಿಗೆ ಕನಿಷ್ಠ 5 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಿದ್ದೆವು. ಸರ್ಕಾರ ಅನುದಾನ ನೀಡಿದರೆ ನಾಲೆಗಳ ದುರಸ್ತಿ ಮತ್ತು ಗೇಟ್‌ಗಳ ದುರಸ್ಥಿ ಮಾಡಿಸಬಹುದೆಂದು ಗಿರೀಶ್ ಹೇಳಿದರು.

ಮಹಾಮಂಡಳದ ಇನ್ನೋರ್ವ ನಿರ್ದೇಶಕ ತೇಜಸ್ವಿ ಪಟೇಲ್ ಮಾತನಾಡಿ, ಭದ್ರಾ ಅಚ್ಚುಕಟ್ಟಿನ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಜನಪ್ರತಿನಿಧಿಗಳು ಮತ್ತು ನಾವೆಲ್ಲರೂ ಸೇರಿ ಸರ್ಕಾರದ ಮೇಲೆ ಒತ್ತಡ ಹಾಕಿ ನಾಲೆಗಳ ದುರಸ್ಥಿಗೆ ಅನುದಾನ ತರುವ ಪ್ರಯತ್ನ ಮಾಡಬೇಕಿದೆ ಎಂದರು.

ಭದ್ರಾ ಅಧೀಕ್ಷಕ ಇಂಜಿನಿಯರ್ ಸುಜಾತ ಅವರು, ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಭದ್ರಾ ಜಲಾನಯನ ಪ್ರದೇಶದಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆ ಇದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ 180 ಅಡಿಗೆ ನೀರನ್ನು ನಿಲ್ಲಿಸಿದ್ದೇವೆ ಎಂದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಮಹಾಮಂಡಳದ ನಿರ್ದೇಶಕರಾದ ಬೆಳಲಗೆರೆ ದೇವೇಂದ್ರಪ್ಪ ಶಿರಮಗೊಂಡನಹಳ್ಳಿಯ ಎ.ಬಿ. ಕರಿಬಸಪ್ಪ, ಹಾಲಿವಾಣದ ಸಣ್ಣ ಪರಮೇಶ್ವರಪ್ಪ, ಕಡ್ಲೇಗೊಂದಿ ಹನುಮಂತರೆಡ್ಡಿ, ಕೆ.ಬೇವಿನಹಳ್ಳಿಯ ಮಲ್ಲಿಕಾರ್ಜುನಪ್ಪ, ಗೋಪನಾಳ್ ಬಂಧು, ಬಿಆರ್‌ಪಿ ರಾಜಣ್ಣ, ಸಿಇಒ ವೀರಪ್ಪ, ಹರಿಹರ ತಾ. ಬಿತ್ತನೆ ಬೀಜ, ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷ ಎಂ. ಕರಿಬಸಯ್ಯ, ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ವೀರಯ್ಯ, ವಾಸನದ ಬಿ.ಎಸ್.ಮಂಜುನಾಥ್, ಟಿ. ಹೆಚ್.ಬಸವರಾಜ್, ನಂದಿಗುಡಿ ಷಣ್ಮುಖಯ್ಯ, ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ದಿವಾಕರಪ್ಪ, ನಂದಿತಾವರೆ ಮುರುಗೇಂದ್ರಯ್ಯ, ಮಂಜುಳಮ್ಮ, ಪಿ.ಗದಿಗೆಪ್ಪ, ಎನ್. ಪಿ.ಧರ್ಮರಾಜ್, ಟಿ.ನಂದೀಶ್, ಶಿರಮಗೊಂಡನಹಳ್ಳಿಯ ಎ.ಎಂ.ಮಂಜುನಾಥ್, ಐ.ಎಸ್.ರುದ್ರಮುನಿ, ಹೊನ್ನಾಳಿಯ ನರೇಂದ್ರ ಕಂಬಳಿ, ಮಲೇಬೆನ್ನೂರು ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಸಾಬೀರ್ ಅಲಿ, ಭಾನುವಳ್ಳಿ ಸುರೇಶ್, ಪಿ.ಆರ್.ರಾಜು, ಎ.ಕೆ.ಲೋಕೇಶ್, ಬಿ.ಚಂದ್ರಪ್ಪ, ಸಂಗಮೇಶ್, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ರೈತರಾದ ಬೆಣ್ಣೆಹಳ್ಳಿ ಶಿವಕುಮಾರ್, ಪೂಜಾರ್ ಪರಮೇಶ್ವರಪ್ಪ, ಪೂಜಾರ್ ಹಾಲೇಶ್, ಹರಿಹರ ತಾ. ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು ಸೇರಿದಂತೆ ಇತರರು ಭಾಗವಹಿಸಿದ್ದರು.

# ಹಿರೇಮೇಗಳಗೇರೆಯಲ್ಲಿ ಇಂದು ಬಸವ ಪಂಚಮಿ

ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಮಿತಿ ವತಿಯಿಂದ ಹರಪನಹಳ್ಳಿ ತಾಲ್ಲೂಕಿನ ಹಿರೇಮೇಗಳಗೇರೆ ಗ್ರಾಮದ ಜನತಾ ಪ್ರೌಢಶಾಲೆಯಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ 'ಬಸವ ಪಂಚಮಿ' ಆಚರಿಸಲಾಗುವುದು.

# ಅಂತರಂಗದ ಚೈತನ್ಯವೇ ಇಷ್ಟಲಿಂಗ ಪೂಜೆ

## ಮಾಸಿಕ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಕಾರ್ಯಕ್ರಮದಲ್ಲಿ ಪಂಡಿತಾರಾಧ್ಯ ಶ್ರೀಗಳ ಆಶೀರ್ವಚನ



ಸಾಣೇಹಳ್ಳಿ, ಆ.6- ಅಂತರಂಗದ ಚೈತನ್ಯವೇ ಇಷ್ಟಲಿಂಗ ಪೂಜೆ. ಈ ಪೂಜೆ ಮಾಡಲು ಪೂಜಾರಿ, ಪುರೋಹಿತರ ಅವಶ್ಯವಿಲ್ಲ ಎಂದು ಪಂಡಿತಾರಾಧ್ಯ ಶ್ರೀಗಳು ಹೇಳಿದರು.

ಇಲ್ಲಿನ ಗುರುಬಸವ ಮಹಾಮನೆಯಲ್ಲಿ ಏರ್ಪಡಿಸಿದ್ದ ಮಾಸಿಕ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪೂಜಾರಿ ಮತ್ತು ಪುರೋಹಿತರ ಶೋಷಣೆಯಿಂದ ಮುಕ್ತರಾಗಲು ಇಷ್ಟಲಿಂಗ ಪೂಜೆಯಿಂದ ಸಾಧ್ಯ. ದೇವರ ಹೆಸರಿನಲ್ಲಿ ಅಜ್ಞಾನಿ, ಮೂಢರಾದವರು ಅದರಿಂದ ಹೊರಬರಲು ಇಚ್ಛಿಸುವವರಿಗೆ ಇಷ್ಟಲಿಂಗ ದೀಕ್ಷೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಇಷ್ಟಲಿಂಗ ಧರಿಸಿದವರು ಬೇರೆ ದೇವರುಗಳ ಗೊಡವೆಗೆ ಹೋಗಬಾರದು, ಜಾತಿ ಭೇದ ಮಾಡದೇ ಎಲ್ಲರೂ ಶಿವನ ಮಕ್ಕಳೆಂದು ಭಾವಿಸಬೇಕು ಮತ್ತು ಸೋಮಾರಿಗಳಾಗದೇ ಕೆಲಸ, ಕಾರ್ಯಗಳನ್ನು ಶ್ರದ್ಧೆ, ಪ್ರಾಮಾಣಿಕತೆಯಿಂದ ಮಾಡಬೇಕು ಎಂದರು.

ವ್ಯಕ್ತಿಯ ಸರ್ವಾಂಗೀಣ ಉನ್ನತಿಗೆ ಅಷ್ಟಾವರಣಗಳು ಸಹಕಾರಿಯಾಗಲಿವೆ. ಗುರುವಿಗೆ ವಿಶೇಷವಾದ ಸ್ಥಾನಮಾನ ಲಿಂಗಾಯತ ಧರ್ಮದಲ್ಲಿದೆ. ಯಾರು ಸರಿಯಾದ ಅರಿವು ಪಡೆದು, ಆಚಾರಕ್ಕೆ ತಂದು ಅನುಷ್ಠಾನ ಮಾಡಿಕೊಳ್ಳುವರೋ ಅವರು ಮಾತ್ರ ಗುರುವಾಗಲು ಸಾಧ್ಯ ಎಂದರು.

ಧರ್ಮ, ದೇವರುಗಳು ಭಯದ ಮೂಲವಾಗಿದ್ದ ಆ ಕಾಲದಲ್ಲಿ ಬಸವಣ್ಣನವರು ದೇವರು, ಧರ್ಮವು ಭಯದ ಮೂಲವಲ್ಲ, ದಯೆಯ ಮೂಲ ಎಂದಿದ್ದಾರೆ. ಆದ್ದರಿಂದ 'ದಯೆಯಿಲ್ಲದೆ ಧರ್ಮವಿಲ್ಲ ಎಂಬುದನ್ನು ತಿಳಿಯಬೇಕು ಎಂದು ಹೇಳಿದರು.

ಏಕ ದೇವನಿಷ್ಠೆಗೆ 12ನೇ ಶತಮಾನದ ಎಲ್ಲ ಶರಣರು ಒತ್ತು ಕೊಟ್ಟರು. ಶರಣರು ಅನುಭವ ಮಂಟಪದ ಸಂಪರ್ಕಕ್ಕೆ ಬಂದ ಮೇಲೆ ಸ್ಥಾವರ ದೇವರುಗಳನ್ನು ನಿರಾಕರಿಸಿ, ಇಷ್ಟಲಿಂಗ ಕಟ್ಟಿಕೊಂಡು ಇಷ್ಟಲಿಂಗ ನಿಷ್ಠೆ ಬೆಳೆಸಿಕೊಂಡರು ಎಂದರು.

ಈ ವೇಳೆ ಸಂಗೀತ ಶಿಕ್ಷಕ ಎಚ್.ಎಸ್. ನಾಗರಾಜ್, ವಚನಗಳನ್ನು ಹೇಳಿಕೊಟ್ಟರು. ಸಿರಿಮಠ ಹಾಗೂ ಕರ್ಣ ಪೂಜೆಯ ವ್ಯವಸ್ಥೆಯನ್ನು ಮಾಡಿದರು. ಮುಖ್ಯಶಿಕ್ಷಕ ಬಿ. ಎಸ್. ಶಿವಕುಮಾರ್ ಇದ್ದರು. ಸಾಣೇಹಳ್ಳಿಯ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ಇಷ್ಟಲಿಂಗ ದೀಕ್ಷೆ ಪಡೆದುಕೊಂಡರು.

# ತಾಂತ್ರಿಕತೆ : ಹೆಚ್ಚಿನ ಇಳುವರಿ ಪಡೆದರೆ ಆರ್ಥಿಕ ಸದೃಢತೆ

## ಹರಪನಹಳ್ಳಿ : ಕೃಷಿ ಪರಿಕರ ವಿತರಣೆ ಸಭೆಯಲ್ಲಿ ಶಾಸಕರಾದ ಎಂ.ಪಿ ಲತಾ



ಹರಪನಹಳ್ಳಿ,ಆ.6- ಪೌಷ್ಠಿಕ ಆಹಾರ ಬೆಳೆಯಲು ರೈತರ ಅನುಕೂಲಕ್ಕಾಗಿ ಕೃಷಿ ಇಲಾಖೆಯಿಂದ ತಾಲೂಕಿನಾದ್ಯಂತ ವಿವಿಧ ಪರಿಕರಗಳನ್ನು ವಿತರಣೆ ಮಾಡಲಾಗುತ್ತದೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ಕಾನಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯವರು 2024-25ನೇ ಸಾಲಿನಲ್ಲಿ ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆ ಅಡಿ ಕೃಷಿ ಪರಿಕರಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಳೇ ಪದ್ದತಿಯನ್ನು ಹೊಸ ತಾಂತ್ರಿಕತೆಯಲ್ಲಿ ಅಳವಡಿಸಿಕೊಂಡು, ಹೆಚ್ಚಿನ ಇಳುವರಿ ಪಡೆದು, ಆರ್ಥಿಕವಾಗಿ ಸದೃಢವಾಗಿರಿ, ರಾಸಾಯನಿಕ ಗೊಬ್ಬರ ಕಡಿಮೆ ಮಾಡಿ, ಸಾವಯವ ಗೊಬ್ಬರವನ್ನು ಹೆಚ್ಚು ಬಳಸುವಂತೆ ಅವರು ರೈತರಿಗೆ ಸಲಹೆ ನೀಡಿದರು.

ಸಹಾಯಕ ಕೃಷಿ ನಿರ್ದೇಶಕ ವಿ.ಸಿ ಉಮೇಶ್ ಮಾತನಾಡಿ, ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಇಂದು ಆಹಾರವನ್ನು ಉತ್ಪಾದನೆ ಮಾಡಬೇಕಿದೆ, ಆಹಾರ ಉತ್ಪಾದನೆಯಲ್ಲಿ ನಾವು ಸ್ವಾವಲಂಬಿಯಾದರೂ ಅಪೌಷ್ಟಿಕತೆಯಿಂದ ಇಂದು ಅನೇಕರು ಬಳಲುತ್ತಿದ್ದಾರೆ. ಕೃಷಿ ಇಲಾಖೆಯಿಂದ ಕೊಡುವ ವಿವಿಧ ಪರಿಕರಗಳನ್ನು ಬಳಸಿಕೊಂಡು ಹೆಚ್ಚಿನ ಇಳುವರಿ ಪಡೆಯಿರಿ ಎಂದು ತಿಳಿಸಿದರು.

ಮಾಡ್ಲಗೇರಿ ಗ್ರಾ.ಪಂ ಅಧ್ಯಕ್ಷೆ ಹೊಮಾಲಿಬಾಯಿ ಅಧ್ಯಕ್ಷತೆ ವಹಿಸಿದ್ದರು. ಹೊಸಪೇಟೆ ಉಪಕೃಷಿ ನಿರ್ದೇಶಕ ನಯೀಮ್ ಪಾಷ, ಗ್ರಾ.ಪಂ ಉಪಾಧ್ಯಕ್ಷೆ ಪಕ್ಕೀರವ್ವ, ಸದಸ್ಯರಾದ ಎಂ.ನಿರ್ಮಲ, ಕೊಳಚಿ ನಾಗರಾಜ, ಎಚ್.ಉಚ್ಚೆಂಗೆಪ್ಪ, ಮುಖಂಡರಾದ ಪಿ.ರುದ್ರಪ್ಪ, ಪರಮೇಶ್ವರಪ್ಪ, ರಾಮಕೃಷ್ಣ, ಮುನ್ನಾ ಸಾಬ್, ಕೃಷಿ ಅಧಿಕಾರಿ ನಾಗರಾಜ ಸಕ್ರಿಗೌಡರು, ಡಾ.ಎನ್.ಎಚ್ ಸುನೀತಾ, ಗ್ರಾ.ಪಂ ಪಿಡಿಒ ಆನಂದನಾಯ್ಕ ಉಪಸ್ಥಿತರಿದ್ದರು.

**ಗ್ರಾಮಸ್ಥರ ಮನವಿ:** ಕಾನಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯುವಂತೆ ಗ್ರಾಮಸ್ಥರು ಶಾಸಕರಿಗೆ ಮನವಿ ಮಾಡಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಈಗಾಗಲೇ ನಿಮ್ಮ ಊರಿನ ದೊಡ್ಡ ಕೆರೆಗೆ ನೀರು ಹರಿಸಲು 50 ಕೆರೆ ಯೋಜನೆಯಡಿ ಯಲ್ಲಿ ಸೇರಿದೆ. ಚಿಕ್ಕ ಕೆರೆಗೆ ನೀರು ಹರಿಸಲು ಅಗಲ್ಲ ಎಂದ ಅವರು ಚರಂಡಿ ಸ್ವಚ್ಛಗೊಳಿಸಿ ಬ್ಲೀಚಿಂಗ್ ಪೌಡರ್ ಸಿಂಪಡಿಸುವಂತೆ ಪಿಡಿಒಗೆ ಸೂಚಿಸಿದರು.

# ವೀರಶೈವ ಮಹಾಸಭಾದಿಂದ ಇಂದು ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಣೆ



ದಾವಣಗೆರೆ ಜಿಲ್ಲೆಯ ಜೀವನಾಡಿ ಭದ್ರಾ ಆಣೆಕಟ್ಟು ತುಂಬಿ ಹರಿಯುತ್ತಿದ್ದು, ಈ ಶುಭ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ಶ್ರೀನಿವಾಸ್ ಶಿವಗಂಗಾ ಅವರ ನೇತೃತ್ವದಲ್ಲಿ ಭದ್ರೆಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಣೆ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷ ಶಂಭು ಎಸ್. ಉರೇಕೊಂಡಿ ತಿಳಿಸಿದ್ದಾರೆ.

# ಶೋಷಿತ ವರ್ಗಗಳ ಒಕ್ಕೂಟ ಕರೆ ನೀಡಿದ್ದ ಹೊನ್ನಾಳಿ ಬಂದ್ ಯಶಸ್ವಿ




ಹೊನ್ನಾಳಿ, ಆ. 6- ಮುಡಾ ಹಗರಣ ಸಿದ್ದರಾಮಯ್ಯ ಅವರ ಕಾಲದಲ್ಲಿ ನಡೆದಿಲ್ಲ. ಬಿಜೆಪಿ ಅಧಿಕಾರವಧಿಯಲ್ಲಿ ನಡೆದ ಪ್ರಕರಣ. ಎಲ್ಲರಂತೆಯೇ ಸಿಎಂ ಸಿದ್ದರಾಮಯ್ಯ ಅವರ ಪತ್ನಿಗೆ ಮುಡಾ ನಿವೇಶನ ಹಂಚಿಕೆಯಾಗಿದ್ದು, ಇದರಲ್ಲಿ ಸಿದ್ದರಾಮಯ್ಯ ಅವರ ಪಾತ್ರವೇನೂ ಇಲ್ಲ. ಆದರೂ ಸಹ ಕಳಂಕ ರಹಿತ ರಾಜಕಾರಣಿ ಸಿದ್ದರಾಮಯ್ಯ ವಿರುದ್ಧ ವಿಪಕ್ಷಗಳು ಹಾಗೂ ಕೇಂದ್ರ ಸರ್ಕಾರ ಇಲ್ಲಸಲ್ಲದ ಷಡ್ಯಂತ್ರ ನಡೆಸುತ್ತಿವೆ. ಸಿದ್ದು ಅವರ ಶಕ್ತಿಯನ್ನಾಗಲೀ, ಪ್ರಭಾವವನ್ನಾಗಲೀ ಕುಗ್ಗಿಸಲು ಮೋದಿಗಾಗಲೀ, ರಾಜ್ಯ ಬಿಜೆಪಿಗಾಗಲೀ ಸಾಧ್ಯವಿಲ್ಲ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಹೊನ್ನಾಳಿಯಲ್ಲಿ ಸಿದ್ದರಾಮಯ್ಯ ಅಭಿಮಾನಿ ಬಳಗ, ಅಹಿಂದ ಮತ್ತು ಶೋಷಿತ ವರ್ಗಗಳ ಒಕ್ಕೂಟಗಳು ಇಂದು ನೀಡಿದ್ದ 'ಹೊನ್ನಾಳಿ ಬಂದ್' ಕರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವ್ಯಕ್ತಿಯೊಬ್ಬ ನೀಡಿದ ದೂರು ಆಧರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನೀಡಿರುವ ಶೋಕಾಸ್ ನೋಟಿಸನ್ನು ರಾಜ್ಯಪಾಲರು ಕೂಡಲೇ ಹಿಂಪಡೆಯಬೇಕು. ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಅನಗತ್ಯ ಆರೋಪ ಸಲ್ಲದು ಎಂದರು.

ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನ ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಶೋಷಿತ ಸಮುದಾಯಗಳ, ಅಹಿಂದ ಒಕ್ಕೂಟದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಹಾಗೂ ಹೊನ್ನಾಳಿ ಬಂದ್ ಯಶಸ್ವಿಯಾಗಿದೆ.ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಶಾಸಕರು ಎಚ್ಚರಿಸಿದರು.

ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಬಂಧನ, ಜಾರ್ಖಂಡ್ ಹೇಮಂತ್ ಸೂರೇನ್ ಅವರ ವಿರುದ್ಧವೂ ಕೂಡ ಸುಳ್ಳು ಆರೋಪಗಳ ಮೂಲಕ ಜೈಲಿಗೆ ಕಳಿಸುವ ಹುನ್ನಾರವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ ಎಂದು ಟೀಕಿಸಿದರು.

ನಂತರ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ನೆಲಹೊನ್ನೆ ಮೋಹನ್ ಮಾತನಾಡಿ, ರಾಜ್ಯದಲ್ಲಿ ಒಬ್ಬ ಹಿಂದುಳಿದ ವರ್ಗದ ವ್ಯಕ್ತಿ ಮುಖ್ಯಮಂತ್ರಿಯಾಗಿ ಅತ್ಯಂತ ಪ್ರಾಮಾಣಿಕ, ಯಶಸ್ವಿಯಾಗಿ ಆಡಳಿತ ಮಾಡಿಕೊಂಡು ಬರುತ್ತಿರುವ ಸಿದ್ದರಾಮಯ್ಯ ಅವರನ್ನು ಸಹಿಸದೇ ಷಡ್ಯಂತ್ರ ಮಾಡುತ್ತಿರುವುದು ಖಂಡನೀಯ ಎಂದರು.

ಪ್ರತಿಭಟನೆಯ ನಂತರ ಪಟ್ಟಣದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಉಪ ವಿಭಾಗಾಧಿಕಾರಿ ವಿ.ಅಭಿಷೇಕ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

## ಸಿಎಂ ಸಿದ್ದು ಶಕ್ತಿ ಕುಂದಿಸಲು ಯಾರಿಂದಲೂ ಸಾಧ್ಯವಿಲ್ಲ: ಶಾಸಕ ಶಾಂತನಗೌಡ

ತಹಶೀಲ್ದಾರ್ ಪಟ್ಟರಾಜಗೌಡ, ಹೆಚ್ಚುವರಿ ಎಸ್ಪಿ ವಿಜಯಕುಮಾರ್ ಸಂತೋಷ್, ಡಿವೈಎಸ್ಪಿ ರುದ್ರಪ್ಪ ಉಜ್ಜಿನಕೊಪ್ಪ, ಪಿ.ಐ.ಸುನಿಲ್ ಕುಮಾರ್, ಕುರುಬ ಸಮಾಜದ ಉಪಾಧ್ಯಕ್ಷ ಕೆ.ಪುಟ್ಟಪ್ಪ, ಖಜಾಂಚಿ ಎಚ್.ಎ. ನರಸಿಂಹಪ್ಪ, ಹೆಚ್.ಎ. ಉಮಾಪತಿ, ಅಲ್ಪಸಂಖ್ಯಾತ ಸಮುದಾಯ ಅಧ್ಯಕ್ಷ ಚೀಲೂರು ವಾಜೀದ್, ಸಾಸ್ವೆಹಳ್ಳಿ ಅಬ್ದುಲ್ ಜಬ್ಬಾರ್ ಖಾನ್, ಬಂಜಾರ ಸಮಾಜದ ಅಧ್ಯಕ್ಷ ಅಂಜುನಾಯ್ಕ, ಹಾಲುಮತ ಸಮುದಾಯದ ರಾಜು ಕಣಗಣ್ಣಾರ, ಬೇಲಿಮಲ್ಲೂರು ನರಸಪ್ಪ, ದಿಡಗೂರು ಜಿ.ಎಚ್.ತಮ್ಮಣ್ಣ, ಅರಕೆರೆ ಮಧುಗೌಡ, ಕುಂಬಳೂರು ವಾಗೀಶ್, ಎ.ಡಿ.ಈಶ್ವರಪ್ಪ, ಬೆನಕನಹಳ್ಳಿ ವೀರಣ್ಣ, ಕೆಂಗಲಹಳ್ಳಿ ಪ್ರಭಾಕರ್, ಉಪ್ಪಾರ ಸಮಾಜದ ಅಧ್ಯಕ್ಷ ಷಣ್ಮುಖಪ್ಪ, ಆರ್.ನಾಗಪ್ಪ, ಎಚ್.ಬಿ.ಅಣ್ಣಪ್ಪ ಸೇರಿದಂತೆ, ನೂರಾರು ಜನ ಅಹಿಂದ ಒಕ್ಕೂಟದ ಮುಖಂಡರು ಇದ್ದರು.

ಹೊನ್ನಾಳಿ ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಎಲ್ಲಾ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು.

# ಆನ್‌ಲೈನ್ ವಂಚನೆ : ಬ್ಯಾಂಕ್ ಪರಿಹಾರ ಮೂರು ಪಟ್ಟು ಹೆಚ್ಚಳ

**(1ನೇ ಪುಟದಿಂದ)** ಅನಧಿಕೃತವಾಗಿ ಆನ್‌ಲೈನ್ ಮೂಲಕ ಬ್ಯಾಂಕಿಂಗ್ ವಹಿವಾಟು ನಡೆದಲ್ಲಿ ಗ್ರಾಹಕರ ಮೇಲಿನ ಹೊಣೆಗಾರಿಕೆ ಸೀಮಿತ ಮಾಡುವಂತೆ 2017ರಲ್ಲಿ ರಿಸರ್ವ್ ಬ್ಯಾಂಕ್ ಸೂಚನೆಗಳನ್ನು ಹೊರಡಿಸಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ. ಅನಧಿಕೃತ ವಹಿವಾಟು ನಡೆದ ಪ್ರಕರಣಗಳಲ್ಲಿ ಬ್ಯಾಂಕ್ ಕಡೆಯಿಂದ ವಂಚನೆ ಇಲ್ಲವೇ ನಿರ್ಲಕ್ಷ ಆದಲ್ಲಿ ಗ್ರಾಹಕರ ಮೇಲೆ ಯಾವುದೇ ಹೊಣೆ ಇರುವುದಿಲ್ಲ. ಬ್ಯಾಂಕ್ ಇಲ್ಲವೇ ಗ್ರಾಹಕರ ಕಡೆಯಿಂದ ಯಾವುದೇ ಲೋಪವಾಗದೇ ವ್ಯವಸ್ಥೆಯಲ್ಲಿ ಬೇರೆಲ್ಲೂ ಲೋಪ ಇದ್ದರೂ ಸಹ, ಗ್ರಾಹಕರು ವಂಚನೆ ನಡೆದ ಮೂರು ದಿನಗಳಲ್ಲಿ ಸಂಬಂಧಿಸಿದ ಬ್ಯಾಂಕ್‌ಗೆ ಮಾಹಿತಿ ನೀಡಿದಲ್ಲಿ ಅವರ ಮೇಲೆ ಯಾವುದೇ ಹೊಣೆ ಇರುವುದಿಲ್ಲ.


## ಪುಣ್ಯಸ್ಮರಣೆ



ನಿಧನ : 07.08.2005 ನಿಧನ : 08.01.2007

**ದಿ|| ಎಸ್.ಪಿ. ಸಂಗಪ್ಪ, ದಿ|| ಶ್ರೀಮತಿ ಸರ್ವಮಂಗಳಮ್ಮ**

ಹಾಲು-ಜೇನಿನಂತೆ ಬೆರೆತ ನಿಮ್ಮ ಜೀವನ ಪ್ರೀತಿ
ನಮ್ಮ ಬಾಳಿಗೆ ಅದುವೇ ಆದರ್ಶ, ಸ್ಫೂರ್ತಿ

ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು
ಹಾಗೂ ಬಂಧು ವರ್ಗ

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ಪದ್ಮಶಾಲಿ ಶ್ರೀಮತಿ ಲಕ್ಷ್ಮಿದೇವಿ**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸವಿನೆನಪು, ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಪತಿ: ಎನ್. ನಾಗರಾಜ್ ಮತ್ತು ಮಕ್ಕಳು, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಎಕ್ಸ್‌ಟೆನ್ಷನ್ ಕನ್ಸೂಮರ್ ಕೋ ಆಪರೇಟಿವ್ ಸೊಸೈಟಿ ಮಾಲೀಕರೂ, ನಮ್ಮ ಸಂಘದ ಸದಸ್ಯರೂ, ಸ್ವಕುಳಸಾಳಿ ಸಮಾಜದ ಮುಖಂಡರೂ ಆದ

**ಶ್ರೀ ಸಿ.ಎಂ. ಬಾಬುರಾವ್ ಚಿಲ್ಲಾಳ್**
**(ಸೊಸೈಟಿ ಬಾಬಣ್ಣ)**

ಅವರು, ದಿನಾಂಕ 06-08-2023ರಂದು ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ದಾವಣಗೆರೆ ನಗರ ಬಳಕೆದಾರರ ಸಹಕಾರ ಸಂಘಗಳ
ಮತ್ತು ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘ (ರಿ.)
ಜನತಾ ಬಜಾರ್ ಕಟ್ಟಡ, ದಾವಣಗೆರೆ.


## ನಿರಂಜನ್ ನಿಧನ



ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ನೌಕರರೂ, ಬ್ರಾಹ್ಮಣ ಸಮಾಜ ಸೇವಾ ಸಂಘದ ಸದಸ್ಯರೂ, ದತ್ತಿ ವಿದ್ಯಾರ್ಥಿ ವೇತನ ನಿಧಿಯ ಸಂಸ್ಥಾಪಕ ದಾನಿಗಳೂ, ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಅಧ್ಯಕ್ಷರೂ, ವಿಪ್ರವಟು ಶಿಕ್ಷಣ ಸಮಿತಿಯ ಸದಸ್ಯರೂ ಆದ ಪಿ.ಜಿ. ನಿರಂಜನ್ ಅವರು ಇಂದು ಮಧ್ಯಾಹ್ನ 12.10ಕ್ಕೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

# ನವಜಾತ ಶಿಶುವಿನ ಆರೋಗ್ಯಕರ ಬೆಳವಣಿಗೆಯಲ್ಲಿ ಸ್ತನ್ಯಪಾನ ಮಹತ್ವದ ಪಾತ್ರ



ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಡಾ. ಜಿ.ಎಸ್. ಲತಾ

ದಾವಣಗೆರೆ, ಆ.6- ಸ್ತನ್ಯಪಾನವು ನವಜಾತ ಶಿಶುವಿನ ಆರೋಗ್ಯಕರವಾದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆಗಸ್ಟ್ 1 ರಿಂದ 7 ರವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ ಸ್ತನ್ಯಪಾನ ಸಪ್ತಾಹವನ್ನು ಜಾಗತಿಕವಾಗಿ ಆಚರಿಸಲಾಗುತ್ತಿದ್ದು, ಈ ಸಪ್ತಾಹ ತಾಯಂದಿರು ತಮ್ಮ ಶಿಶುಗಳಿಗೆ ಸ್ತನ್ಯಪಾನ ಮಾಡಿಸಲು ಪ್ರೇರೇಪಿಸುವುದು. ತಾಯಿ ಹಾಲಿನ ಮಹತ್ವವನ್ನು ತಿಳಿಸುವುದು ಹಾಗೂ ಸ್ತನ್ಯಪಾನ ಕುರಿತಾದ ಜಾಗೃತಿ ಮೂಡಿಸುವುದ ಮುಖ್ಯ ಉದ್ದೇಶವಾಗಿದೆ ಎಂದು ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಮಕ್ಕಳ ವಿಭಾಗದ ಪ್ರಾಧ್ಯಾಪಕರಾದ ಡಾ. ಜಿ.ಎಸ್. ಲತಾ ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಸ್ತನ್ಯಪಾನದ ಅಂತರವನ್ನು ಕಡಿಮೆಗೊಳಿಸಿ, ಎದೆ ಹಾಲುಣಿಸಲು ತಾಯಂದಿರನ್ನು ಪ್ರೋತ್ಸಾಹಿಸಿ' ಎಂಬ ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಎದೆಹಾಲು ಮಗುವಿಗೆ ಸಂಪೂರ್ಣ ಆಹಾರ ಹಾಗೂ ಅತ್ಯುತ್ತಮ ಪೋಷಕಾಂಶಗಳನ್ನು ಒದಗಿಸುತ್ತಿದೆ.

ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಗುಣವನ್ನು ಎದೆ ಹಾಲು ಹೊಂದಿರುವುದರಿಂದ ಮಕ್ಕಳ ಅತಿಸಾರ, ಶೀತ, ಕಫ ಮತ್ತು ಬ್ಯಾಕ್ಟೀರಿಯಾ, ವೈರಸ್ ದಾಳಿಯಿಂದ ಕಾಪಾಡುತ್ತದೆ. ಇತರೆ ಸಾಂಕ್ರಾಮಿಕ ರೋಗಗಳಿಂದ ಕೂಡಾ ರಕ್ಷಣೆ ಸಿಗುಲಿದ್ದು, ಮುಂದೆ ಶುಗರ್, ಬಿ.ಪಿ. ಕಾಯಿಲೆಗಳು ಕಡಿಮೆ ಪ್ರಮಾಣದಲ್ಲಿ ಕಂಡು ಬರುವುದು ಎಂದು ಡಾ. ಲತಾ ತಿಳಿಸಿದರು.

ಮಗುವಿನ ಮೆದುಳಿನ ಬೆಳವಣಿಗೆ, ಚುರುಕುತನ, ಐಕ್ಯೂ ಹೆಚ್ಚಾಗುವಂತೆ ಮಾಡುವ ಶಕ್ತಿ ಹೊಂದಿರುವ ಸ್ತನ್ಯಪಾನ ತಾಯಿಯ ಆರೋಗ್ಯಕ್ಕೂ ಸಹ ಬಹಳ ಮುಖ್ಯವಾಗಿದ್ದು, ಹೆರಿಗೆಯ ನಂತರ ತೂಕ ಕಡಿಮೆ ಮಾಡಲು ಸಹಾಯಕವಾಗುತ್ತದೆ. ತಾಯಿ-ಮಗುವಿನ ಬಾಂಧವ್ಯ ಬೆಳೆಯಲು ಅನುಕೂಲವಾಗುತ್ತದೆ. ಸ್ತನ್ಯಾಪಾನ ಮಾಡಿಸುವ ತಾಯಂದಿರಲ್ಲಿ ಸ್ತನ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್‌ಗಳಂತಹ ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಕಡಿಮೆ ಮಾಡುತ್ತದೆ ಎಂದು ಡಾ. ಲತಾ ವಿವರಿಸಿದರು.

ವಿಶ್ವ ಸ್ತನ್ಯಪಾನ ಸಪ್ತಾಹದ ಆಚರಣೆ ನಮ್ಮ ಸಮಾಜದಲ್ಲಿ ಸ್ತನ್ಯಪಾನದ ಮಹತ್ವವನ್ನು ಕುರಿತು ಹೆಚ್ಚಿನ ಜಾಗೃತಿಯನ್ನು ಮೂಡಿಸಲು ಮತ್ತು ತಾಯಿಂದಿರಿಗೆ ಅಗತ್ಯವಾದ ಬೆಂಬಲವನ್ನು ಒದಗಿಸಲು ಸಹಾಯವಾಗುತ್ತದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ದೇಶಕರಾದ ಡಾ. ಗುರುಪ್ರಸಾದ್, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ, ಹಿರಿಯ ಮಕ್ಕಳ ತಜ್ಞರಾದ ಡಾ. ಸುರೇಶ್ ಬಾಬು, ಡಾ. ಕೌಜಲಗಿ, ಡಾ. ಮೃತ್ಯುಂಜಯ, ಡಾ. ಮೂಗನಗೌಡ ಉಪಸ್ಥಿತರಿದ್ದರು.

# ಮ್ಯಾನ್‌ಮಾರ್ ಸಂಘರ್ಷ ಈಶಾನ್ಯ ನೆಲೆ ಕಳೆದುಕೊಂಡ ಸೈನ್ಯ

ಬ್ಯಾಂಕಾಕ್, ಆ. 6 - ಮ್ಯಾನ್‌ಮಾರ್‌ನಲ್ಲಿ ನಡೆಯುತ್ತಿರುವ ಆಂತರಿಕ ಸಂಘರ್ಷದಲ್ಲಿ ಸೈನಿಕ ಆಡಳಿತಕ್ಕೆ ತೀವ್ರ ಹಿನ್ನಡೆಯಾಗಿದ್ದು, ಈಶಾನ್ಯದಲ್ಲಿರುವ ಪ್ರಮುಖ ಸೈನಿಕ ಕೇಂದ್ರವನ್ನು ಕಳೆದುಕೊಂಡಿದೆ.

ಲಶಿಯೋ ನಗರದಲ್ಲಿರುವ ನಾರ್ತ್‌ಈಸ್ಟ್ ಕಮಾಂಡ್ ಅನ್ನು ಅಲ್ಪಸಂಖ್ಯಾತ ಜನಾಂಗೀಯ ಹೋರಾಟಗಾರರು ವಶಕ್ಕೆ ತೆಗೆದುಕೊಂಡಿದ್ದಾರೆ. ಇದು ದೇಶದ ಅಂತರ್ಯುದ್ಧದಲ್ಲಿ ಸೈನ್ಯಕ್ಕೆ ಆಗಿರುವ ಅತಿ ದೊಡ್ಡ ಹಿನ್ನಡೆ.

ನಾರ್ತ್‌ಈಸ್ಟ್ ಕಮಾಂಡ್ ಕಳೆದುಕೊಂಡಿರುವುದು ಆಡಳಿತಾರೂಢ ಸೈನ್ಯಕ್ಕೆ ಶೋಚನೀಯ ಹಿನ್ನಡೆಯಾಗಿದೆ. ಲಶಿಯೋ ಕೇಂದ್ರವಿಲ್ಲದೇ, ಈಶಾನ್ಯದ ಭಾಗವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಕಠಿಣವಾಗಿದೆ ಎಂದು ಸಿಂಗಪುರದ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ರಾಟಜಿಕ್ ಸ್ಟಡೀಸ್‌ನ ವಿಶ್ಲೇಷಕ ಮೋರ್ಗಾನ್ ಮೈಖೆಲ್ಸ್ ಹೇಳಿದ್ದಾರೆ.

ಸೈನ್ಯ ಮುಂದಿನ ದಿನಗಳಲ್ಲಿ ಕಠಿಣ ಹೋರಾಟ ನಡೆಯುತ್ತಿರುವ ಗಡಿ ಪ್ರದೇಶಗಳಿಗಿಂತ ಮಧ್ಯ ಭಾಗದ ಪ್ರದೇಶಗಳನ್ನು ಭದ್ರಪಡಿಸಿಕೊಳ್ಳುವತ್ತ ಗಮನ ಹರಿಸುವ ಸಾಧ್ಯತೆಯೂ ಇದೆ ಎಂದವರು ಹೇಳಿದ್ದಾರೆ.

ನಾರ್ತ್‌ಈಸ್ಟ್ ಕಮಾಂಡ್ ವ್ಯೂಹಾತ್ಮಕವಾಗಿ ಅತ್ಯಂತ ಪ್ರಮುಖವಾಗಿದೆ. ಚೀನಾ ಸಂಪರ್ಕಿಸುವ ಮ್ಯೂಸ್ ಗಡಿ ಹಾಗೂ ಕ್ಯೌಕ್ಮೆ ಮಾರ್ಗಗಳು ಈ ಭಾಗದಲ್ಲಿವೆ. ಮ್ಯಾನ್‌ಮಾರ್‌ನ ಎರಡನೇ ಅತಿ ದೊಡ್ಡ ನಗರವಾದ ಮಾಂಡಲೆ ಸಂಪರ್ಕಿಸುವ ದಾರಿಯೂ ಈ ಭಾಗದಿಂದಲೇ ಸಾಗುತ್ತದೆ ಎಂದು ಮೈಖೆಲ್ಸ್ ಹೇಳಿದ್ದಾರೆ.

ಸೋಮವಾರ ದೇಶವನ್ನು ಉದ್ದೇಶಿಸಿ ಮಾತನಾಡಿದ ಸೈನ್ಯದ ಹಿರಿಯ ಜನರಲ್ ಮಿನ್ ಔಂಗ್ ಲೈಂಗ್ ಅವರು, ನಾರ್ತ್ ಈಸ್ಟ್ ಕಮಾಂಡ್ ಕಳೆದುಕೊಂಡಿರುವ ಬಗ್ಗೆ ಅಸ್ಪಷ್ಟ ಹೇಳಿಕೆ ನೀಡಿದ್ದಾರೆ. ಈ ಭಾಗದಲ್ಲಿರುವ ಕೆಲ ಭದ್ರತಾ ಪಡೆಗಳು ಜನರ ಸುರಕ್ಷತೆ ಕಾರಣದಿಂದ ಹಿಂದೆ ಸರಿದಿವೆ ಎಂದವರು ಹೇಳಿದ್ದಾರೆ.

2021ರಲ್ಲಿ ಆಂಗ್ ಸ್ಯಾನ್ ಸೂಕಿ ಅವರ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ ಮಿನ್ ಔಂಗ್ ಲಿಯಾಂಗ್ ಅವರ ನೇತೃತ್ವದ ಸೈನ್ಯ ಅಧಿಕಾರಕ್ಕೆ ಬಂದಿತ್ತು. ಈಗ ಲಿಯಾಂಗ್ ಅವರ ನೇತೃತ್ವದ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ. ಲಶಿಯೋ ನಗರವು ಚೀನಾ ಗಡಿಯಿಂದ 110 ಕಿ.ಮೀ. ದೂರದಲ್ಲಿದೆ. ಮ್ಯಾನ್‌ಮಾರ್ ನ್ಯಾಷನಲ್ ಡೆಮಾಕ್ರಟಿಕ್ ಅಲೈಯನ್ಸ್ ಆರ್ಮಿ (ಎಂ.ಎನ್.ಡಿ.ಎ.ಎ.) ಕಳೆದ ಜುಲೈ ತಿಂಗಳಿಂದ ಈ ಪ್ರಾಂತ್ಯ ವಶಪಡಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸುತ್ತಿತ್ತು.

ಚೀನಾ ಜನಾಂಗೀಯ ಅಲ್ಪಸಂಖ್ಯಾತರು ಎಂ.ಎನ್. ಡಿ.ಎ.ಎ. ಸ್ಥಾಪಿಸಿಕೊಂಡಿದ್ದಾರೆ. ಈ ಸಂಘಟನೆಯು, ಮ್ಯಾನ್‌ಮಾರ್‌ನ ತ್ರೀ ಬ್ರದರ್‌ಹುಡ್ ಅಲೈಯನ್ಸ್ ಭಾಗವಾಗಿದೆ.

ಚೀನಾ ಕಳೆದ ಜನವರಿಯಲ್ಲಿ ಕದನ ವಿರಾಮಕ್ಕೆ ನೆರವಾಗಿತ್ತು. ಆದರೆ, ಜೂನ್ ತಿಂಗಳಲ್ಲಿ ತ್ರೀ ಬ್ರದರ್‌ಹುಡ್‌ನ ಇನ್ನೊಂದು ಸಂಘಟನೆಯಾದ ಟಾಂಗ್ ನ್ಯಾಷನಲ್ ಲಿಬರೇಷನ್ ಹೋರಾಟ ಪುನರಾರಂಭಿಸಿತ್ತು. ನಂತರ ಎಂ.ಎನ್.ಡಿ.ಎ.ಎ. ತಾನೂ ಶಸ್ತ್ರ ಕೈಗೆತ್ತಿಕೊಂಡಿತ್ತು. ಈ ಒಕ್ಕೂಟದ ಮೂರನೇ ಸದಸ್ಯವಾದ ಅರಕನ್ ಆರ್ಮಿ, ರಖೈನ್ ಪ್ರಾಂತ್ಯದಲ್ಲಿ ಹೋರಾಟ ಮುಂದುವರೆಸಿತ್ತು.

ಹೆಚ್ಚಿನ ಸ್ವಾಯತ್ತತೆ ಬೇಕು ಎಂದು ಈ ಗುಂಪುಗಳು ದಶಕಗಳಿಂದ ಮ್ಯಾನ್‌ಮಾರ್ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿವೆ. ಇವುಗಳು ಪ್ರಜಾಪ್ರಭುತ್ವದ ಪರವಾಗಿರುವ ಸಂಘಟನೆಗಳ ಜೊತೆಗೂಡಿ ಸೈನಿಕ ಆಡಳಿತದ ವಿರುದ್ಧ ಸಂಘರ್ಷ ನಡೆಸುತ್ತಿವೆ.

# ಸಂಖ್ಯಾಶಾಸ್ತ್ರಕ್ಕೆ ಅಡಿಪಾಯ ಹಾಕಿದವರು ನೋಬಿಸ್



ದಾವಣಗೆರೆ, ಆ.6- ಸಂಖ್ಯಾ ಶಾಸ್ತ್ರಕ್ಕೆ ಅಡಿಪಾಯ ಹಾಕಿದ ಮಹಾನ್ ವ್ಯಕ್ತಿಯೇ ಪ್ರೊ. ಪಿ.ಸಿ ಮಹಾಲ್‌ನೋಬಿಸ್ ಎಂದು ಜಿ.ಪಂ. ಉಪ ಕಾರ್ಯದರ್ಶಿ ಕೃಷ್ಣನಾಯ್ಕ್ ತಿಳಿಸಿದರು.

ಜಿಲ್ಲಾಡಳಿತ ಭವನದಲ್ಲಿನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಪಿ.ಸಿ. ಮಹಾಲ್‌ನೋಬಿಸ್ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಾಂಖ್ಯಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾಲ್‌ನೋಬಿಸ್‌ರವರು ದೇಶಕ್ಕೆ ನೀಡಿದ ಕೊಡುಗೆ ಶ್ಲಾಘನೀಯವಾಗಿದೆ. ಅಂಕಿ-ಅಂಶಗಳ ಮೂಲಕ ಸಮೀಕ್ಷೆ ಮಾಡುವುದನ್ನು ಅವರು ತೋರಿಸಿ ಕೊಟ್ಟಿದ್ದು, ಮಾದರಿ ಸಮೀಕ್ಷೆ ಅವರ ಅನನ್ಯ ಕೊಡುಗೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಅಂಕಿ-ಅಂಶಗಳ ಸಮೀಕ್ಷೆಗಳು ಸಹಕಾರಿಯಾಗಿವೆ ಎಂದರು.

ಸರ್ಕಾರಿ ಯೋಜನೆಗಳನ್ನು ರೂಪಿಸುವಲ್ಲಿ ಅಂಕಿ-ಸಂಖ್ಯೆಗಳ ಪಾತ್ರ ಮುಖ್ಯವಾಗಿದೆ. ಮತ್ತು ನಂಬಲಾರ್ಹ ಅಂಕಿ-ಅಂಶಗಳನ್ನು ಕಾಲಮಿತಿ ಒಳಗೆ ಸಂಗ್ರಹಿಸಿ ವಿಶ್ಲೇಷಣಾ ವರದಿಯನ್ನು ಪ್ರಕಟಿಸುವಲ್ಲಿ ಸಾಂಖ್ಯಿಕ ಇಲಾಖೆಯ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಮಹಾಲ್‌ನೋಬಿಸ್ ಭಾರತೀಯ ಸಂಖ್ಯಾ ಶಾಸ್ತ್ರೀಯ ಸಂಸ್ಥೆಯನ್ನು ಸ್ಥಾಪಿಸಿ ದೇಶದ ಆರ್ಥಿಕ ಯೋಜನೆ ಮತ್ತು ಅಂಕಿ-ಅಂಶಗಳ ಅಭಿವೃದ್ಧಿ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಸ್ಮರಿಸಿದರು.

ಜಿ.ಪಂ. ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ ಮಾತನಾಡಿ, ಸಂಖ್ಯಾ ಶಾಸ್ತ್ರಜ್ಞ ಪಿ.ಸಿ.ಮಹಾಲ್‌ನೋಬಿಸ್ ಜಯಂತಿಯನ್ನು ಸಾಂಖ್ಯಿಕ ದಿನವನ್ನಾಗಿ ಆಚರಿಸುತ್ತಿರುವುದು ಅರ್ಥ ಪೂರ್ಣವಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸಾಂಖ್ಯಿಕ ಇಲಾಖೆ ಕೈಗೊಳ್ಳುವ ಜನನ-ಮರಣ ನೋಂದಣಿ, ಕೃಷಿ ಅಂಕಿ-ಅಂಶಗಳು, ಬೆಳೆ ಅಂದಾಜು ಸಮೀಕ್ಷೆ, ಧಾರಣೆ ವರದಿ, ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಜಿಲ್ಲಾ ಅಂಕಿ-ಅಂಶ ನೋಟದ ಪ್ರಕಟಣೆ ಹಾಗೂ ಮುಂತಾದ ಕಾರ್ಯಗಳು ಅಭಿವೃದ್ಧಿ ಗಣನೆಯಲ್ಲಿ ಮಹತ್ವದ್ದಾಗಿವೆ ಎಂದು ತಿಳಿಸಿದರು.

ಜಿ.ಪಂ ಉಪ ನಿರ್ದೇಶಕಿ ಶಾರದಾ ದೊಡ್ಡಗೌಡ್ರು, ಸಾಂಖ್ಯಿಕ ಅಧಿಕಾರಿ ನೀಲಾ, ಕೌಶಲ್ಯ ಅಭಿವೃದ್ಧಿ ಸಹಾಯಕ ನಿರ್ದೇಶಕ ಡಾ. ಸಿದ್ದೇಶ್, ಇ.ಒ. ರಾಮ ಭೋವಿ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

# ನಗರದಲ್ಲಿ ನಾಳೆ ವ್ಯಸನಮುಕ್ತ ಚಿಕಿತ್ಸಾ ಶಿಬಿರ

ದಾವಣಗೆರೆ, ಆ. 6 - ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಸಂಘ, ಸಂಸ್ಥೆಗಳ ಸಹಯೋಗದಲ್ಲಿ ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 8 ರ ಗುರುವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಸ್ಥಳೀಯ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ವ್ಯಸನ ಮುಕ್ತ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ವ್ಯಸನಿಗಳಿಗೆ ವ್ಯಸನದಿಂದ ಹೊರ ಬರಲು ವೈದ್ಯರು ಮತ್ತು ನುರಿತ ಕೌನ್ಸಿಲರ್‌ಗ ಳಿಂದ ಚಿಕಿತ್ಸೆ ಮತ್ತು ಸಲಹೆಯನ್ನು ನೀಡಲಾಗುತ್ತದೆ. ವ್ಯಸನಿಗಳ ತೀವ್ರತೆಯನ್ನು ಆಧರಿಸಿ ಚಿಕಿತ್ಸಾ ಸಲಹೆ ನೀಡಲಾಗುತ್ತದೆ. ಆಸಕ್ತರು ನಾಡಿದ್ದು ದಿನಾಂಕ 8 ರ ಗುರುವಾರ ಬೆಳಗ್ಗೆ 9.30ಕ್ಕೆ ಗಾಂಧಿ ಭವನಕ್ಕೆ ಆಗಮಿಸಿ, ನೊಂದಣಿ ಮಾಡಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ. ಧನಂಜಯ ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ವ್ಯಸನ ಮುಕ್ತ ದಿನ ಆಚರಣೆ



ದಾವಣಗೆರೆ, ಆ.6- ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನದ ಅಂಗವಾಗಿ ಆಚರಿಸುವ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಶಿವಯೋಗಿಗಳ ಭಾವಚಿತ್ರಕ್ಕೆ ಅಧಿಕಾರಿಗಳು ಪುಷ್ಪ ನಮನ ಸಲ್ಲಿಸಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಗ್ರಾಮ ಸ್ವರಾಜ್ ಅಭಿಯಾನದ ಆವರಗೆರೆ ರುದ್ರಮುನಿ, ಗ್ರಾಮ ಸೇವಾ ಶ್ರಮ ಸಂಚಾಲಕ ಕಡ್ಲೆಬಾಳು ಪ್ರಕಾಶ್, ಕಸ್ತೂರಬಾ ಗಾಂಧಿ ಸಮಾಜದ ಮಹಿಳಾ ಸಂಚಾ ಲಕಿ ಆರ್. ಉಷಾರಾಣಿ, ಹಿರಿಯ ಸಹಾಯಕ ನಿರ್ದೇಶಕ ಧನಂಜಯ ಹಾಗೂ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮದ್ಯಪಾನ ಸಂಯಮ ಮಂಡಳಿ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಿತು.

# ಹಸೀನಾ, ಸದ್ಯಕ್ಕೆ ಭಾರತದಲ್ಲೇ ನೆಲೆ


**(1ನೇ ಪುಟದಿಂದ)** ಬ್ರಿಟನ್ ಹೇಳಿದೆ.

ಯು.ಎ.ಇ., ಬೆಲಾರಸ್, ಕತಾರ್, ಸೌದಿ ಅರೇಬಿಯಾ ಹಾಗೂ ಫಿನ್ ಲ್ಯಾಂಡ್ ಸೇರಿದಂತೆ ಹಲವು ದೇಶಗಳ ಆಯ್ಕೆಯನ್ನು ಹಸೀನಾ ಈಗ ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ಹಸೀನಾ ಅವರ ಸಹೋದರಿ ಶೇಖ್ ರೆಹಾನಾ ಅವರ ಪುತ್ರಿ ಟುಲಿಪ್ ಸಿದ್ದಿಕ್ ಅವರು ಬ್ರಿಟನ್ ಸಂಸತ್ತಿನ ಸದಸ್ಯೆಯಾಗಿದ್ದಾರೆ. ಬ್ರಿಟನ್‌ಗೆ ತೆರಳಲು ಹಸೀನಾ ಬಯಸಿದ್ದರು. ಆದರೆ, ಬ್ರಿಟನ್ ವಲಸೆ ನಿಯಮಗಳ ಪ್ರಕಾರ ಹೊರಗಿನವರು ಆಶ್ರಯ ಪಡೆಯುವುದನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗುತ್ತದೆ. ತಾತ್ಕಾಲಿಕ ಆಶ್ರಯ ಪಡೆಯಲು ಬ್ರಿಟನ್‌ನಲ್ಲಿ ಅವಕಾಶವಿಲ್ಲ ಎಂದು ಹೇಳಲಾಗುತ್ತಿದೆ.

ಹಸೀನಾ ಅವರ ಕುಟುಂಬದ ಸದಸ್ಯರು ಫಿನ್‌ಲ್ಯಾಂಡ್‌ನಲ್ಲೂ ಇದ್ದಾರೆ. ಅಲ್ಲಿಗೆ ತೆರಳಲೂ ಸಹ ಹಸೀನಾ ಪರಿಶೀಲಿಸುತ್ತಿದ್ದಾರೆ ಎನ್ನಲಾಗುತ್ತಿದೆ.

# 1.64 ಲಕ್ಷ ಕೋಟಿ ರೂ. ಬೆಳೆ ವಿಮೆ ಕ್ಲೇಮು ಪಾವತಿ

**(1ನೇ ಪುಟದಿಂದ)** ಇದುವರೆಗೂ ರೈತರು ಈ ಯೋಜನೆಗಾಗಿ 32,440 ಕೋಟಿ ರೂ.ಗಳ ಕಂತು ನೀಡಿದ್ದಾರೆ. ರೈತರಿಗೆ 1.64 ಲಕ್ಷ ಕೋಟಿ ರೂ.ಗಳನ್ನು ಪಾವತಿ ಮಾಡಲಾಗಿದೆ. ರೈತರ ಕಂತಿಗಿಂತ ಐದು ಪಟ್ಟು ಹೆಚ್ಚು ಹಣ ನೀಡಲಾಗಿದೆ ಎಂದು ಸಚಿವರು ಹೇಳಿದ್ದಾರೆ. ತ್ವರಿತವಾಗಿ ಬೆಳೆ ವಿಮೆ ಕ್ಲೇಮುಗಳನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಾಕಷ್ಟು ಪ್ರಕರಣಗಳಲ್ಲಿ ರಾಜ್ಯಗಳ ಕಾರಣದಿಂದ ಕ್ಲೇಮುಗಳ ಪಾವತಿ ವಿಳಂಬವಾಗುತ್ತಿದೆ ಎಂದು ಮತ್ತೊಂದು ಪ್ರಶ್ನೆಗೆ ಚೌಹಾಣ್ ಉತ್ತರಿಸಿದ್ದಾರೆ.

# ಸತ್ಕಾರ್ಯಗಳಿಗೆ ಪ್ರೇರೇಪಿಸುವವನೇ ನಾಯಕ



ದಾವಣಗೆರೆ, ಆ. 6 - ತನ್ನ ತಂಡದ ಸದಸ್ಯರನ್ನು ಸಮಾಜ ಮುಖಿಯಾದ ಸತ್ಕಾರ್ಯಗಳಿಗೆ ಪ್ರೇರೇಪಿಸುವವನೇ ಸಮರ್ಥ ನಾಯಕ ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ ಹೇಳಿದರು.

ನಗರದ ಬಾಪೂಜಿ ವಿದ್ಯಾ ಸಂಸ್ಥೆಯ ಸಿಬಿಎಸ್‌ಇ ಉನ್ನತ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿ ಸಂಘಗಳ ಪದಾಧಿಕಾರಿಗಳ ಪ್ರತಿಷ್ಠಾಪನಾ ಕಾರ್ಯಕ್ರಮ 'ಕಲಾವೃಕ್ಷ'ವನ್ನು ಉದ್ಘಾಟಿಸಿ, ಶಾಲಾ ಡೈರಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

ಭವಿಷ್ಯದಲ್ಲಿ ಭಾರತಕ್ಕೆ ವಿಶ್ವ ನಾಯಕತ್ವ ವಹಿಸುವ ಅವಕಾಶ ಬರಲಿದ್ದು, ಅದಕ್ಕಾಗಿ ಶಾಲಾ ವಿದ್ಯಾರ್ಥಿಗಳಲ್ಲಿ ಈಗಿಂದಲೇ ನಾಯಕತ್ವ ಗುಣದ ಪರಿಕಲ್ಪನೆಯನ್ನು ಬೆಳೆಸಬೇಕಿದೆ, ಉತ್ತಮ ನಾಯಕತ್ವವು ಒಂದು ಕಲೆಯಾಗಿದ್ದು, ಕಾರ್ಯಕ್ರಮಕ್ಕೆ 'ಕಲಾವೃಕ್ಷ' ಎಂಬ ಶೀರ್ಷಿಕೆಯು ಯೋಗ್ಯವಾಗಿದೆ. ನಾಯಕನಾಗುವವನು ಸಂಘಟನಾತ್ಮಕ ಸಾಮರ್ಥ್ಯವನ್ನು ಮರದ ಬೇರುಗಳಂತೆ ಆಳವಾಗಿ ಊರಿ, ಸದೃಢವಾದ ಕಾಂಡದಿಂದ ಉತ್ತಮ ಸದಸ್ಯತ್ವವೆಂಬ ರೆಂಬೆ ಕೊಂಬೆಗಳನ್ನು ಬೆಳೆಸಿ, ಮೌಲ್ಯವತ್ತಾದ ಚಟುವಟಿಕೆಗಳೆಂಬ ಎಲೆ, ಕಾಯಿ ಹೂವು ಹಣ್ಣುಗಳನ್ನು ಸಮೃದ್ಧವಾಗಿಸಬೇಕು ಎಂದು ಮಂಜುನಾಥ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಆಡಳಿತಾಧಿಕಾರಿಗಳೂ, ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕರೂ ಆದ ಪ್ರೊ. ವೈ.ವೃಷಭೇಂದ್ರಪ್ಪ ಅವರು ಮಾತನಾಡಿ, ಸ್ವಾತಂತ್ರ್ಯಾನಂತರ ನಮ್ಮನಮ್ಮ ದೇಶ ಹತ್ತು ಸಾವಿರ ಪಟ್ಟು ಆರ್ಥಿಕ ಬಲಿಷ್ಠತೆಯನ್ನು ಹೊಂದಿದೆ. ವಿದ್ಯಾರ್ಥಿಗಳು ಮುಂದೆ ಮತ್ತಷ್ಟು ದುಡಿದು ಆರ್ಥಿಕತೆ ಬೆಳೆಸಬೇಕು. ನಮ್ಮ ಸಂವಿಧಾನವನ್ನು ಅರ್ಥ ಮಾಡಿಕೊಂಡು ಅದರಂತೆ ನಡೆಯುವುದು ಮತ್ತು ನಡೆಸುವುದು ಸಹಾ ಉತ್ತಮ ನಾಯಕತ್ವದ ಲಕ್ಷಣ ಎಂದರು.

ಶಾಲಾ ಪ್ರಾಂಶುಪಾಲ ಹೆಚ್. ಎಸ್. ಸತೀಶ್ ಉಪಸ್ಥಿತಿಯಲ್ಲಿ ವರ್ಷಿಣಿ ಹಾಗೂ ಜೋಯಾ ಸುಲ್ತಾನ ಕಾರ್ಯಕ್ರಮ ನಿರೂಪಿಸಿದರು. ಅರ್ಚನಾ ತಂಡದವರು ಪ್ರಾರ್ಥಿಸಿದರು. ಪ್ರಜ್ವಲ್ ಪಟೇಲ್ ಸ್ವಾಗತಿಸಿದರು. ಹಿರಿಯ ಶಿಕ್ಷಕಿ ಆರ್. ಗೀತಾ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಶಿಕ್ಷಕಿ ಕೆ.ಜಿ. ಪುಷ್ಪಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಶ್ರಾವ್ಯ ಬಹುಮಾನಿತರ ಹೆಸರು ಘೋಷಿಸಿದರು. ಹಿರಿಯ ಶಿಕ್ಷಕಿ ಅವಿನಾ ಜೆ.ಎಂ. ಮುಖ್ಯ ಅತಿಥಿಗಳನ್ನು ಪರಿಚಯಿಸಿದರು.

ಹಿರಿಯ ಶಾಲಾ ಸಿಬ್ಬಂದಿ ಮುರುಗೇಶ್, ಪ್ರಶಾಂತ್, ವಿದ್ಯಾರ್ಥಿ ಸಂಘದ ಜಂಟಿ ಕಾರ್ಯದರ್ಶಿ ಜೀವನ್ ಕೃಷ್ಣ, ಸಾಂಸ್ಕೃತಿಕ ಕಾರ್ಯದರ್ಶಿ ಮೊಹಮ್ಮದ್ ಝುಾಯಿದ್, ಗ್ರಂಥಾಲಯ ಕಾರ್ಯದರ್ಶಿ ಸಾನ್ವಿ ಡಿ ಪಿ, ಕ್ರೀಡಾ ಕಾರ್ಯದರ್ಶಿ ಮೊಹಮದ್ ಅನಸ್ ಖಾನ್, ಪ್ರವಾಸ ಕಾರ್ಯದರ್ಶಿ ಕೀರ್ತನ ಆರ್ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ವಂದನೆಗಳನ್ನು ಶ್ವೇತಾ ಜಿ ಶೇಟ್ ಸಮರ್ಪಿಸಿದರು.

# ಮುಡಾ ಪ್ರಕರಣ : ರಾಜ್ಯಪಾಲರಿಗೆ ಇನ್ನಷ್ಟು ಮಾಹಿತಿ ನೀಡಿದ ಅಬ್ರಾಹಂ

ಬೆಂಗಳೂರು, ಆ. 6 - ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಮುಡಾದಿಂದ ಪಡೆದ ಬಿಡಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ದೂರುದಾರ ಟಿ.ಜೆ.ಅಬ್ರಹಾಂ ಅವರಿಂದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಇಂದು ಮತ್ತಷ್ಟು ಮಾಹಿತಿ ಪಡೆದಿದ್ದಾರೆ.

ಅಬ್ರಹಾಂ ಅವರನ್ನು ರಾಜಭವನಕ್ಕೆ ಕರೆಸಿಕೊಂಡ ರಾಜ್ಯಪಾಲರು, ಸುಮಾರು 90 ನಿಮಿಷಗಳ ಕಾಲ ಮುಡಾ ಹಗರಣ ಹಾಗೂ ಅಬ್ರಹಾಂ ವಿರುದ್ಧ ಮುಖ್ಯಮಂತ್ರಿ ಮತ್ತು ಸರ್ಕಾರ ಮಾಡಿರುವ ದೂರಿನ ಬಗ್ಗೆಯೂ ವಿವರಣೆ ಪಡೆದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಬ್ರಹಾಂ ನೀಡಿದ ಮತ್ತಷ್ಟು ದಾಖಲೆ ಹಾಗೂ ಆತ ಮುಡಾಗೆ ನೀಡಿರುವ ಅರ್ಜಿ ಮತ್ತು ಲೋಕಾ ಯುಕ್ತರಿಗೆ ನೀಡಿರುವ ದೂರಿಗೆ ಸಂಬಂಧಿಸಿ ದಂತೆಯೂ ಮಾಹಿತಿ ಪಡೆದುಕೊಂಡರು.

ಅಬ್ರಹಾಂ ದೂರಿನ ಮೇಲೆ ಸರ್ಕಾರಕ್ಕೆ ನೀಡಿದ್ದ ನೋಟಿಸ್‌ಗೆ ಬಂದಿರುವ ಎರಡು ಪತ್ರಗಳಲ್ಲಿ ತಮಗೆ ಎದುರಾದ ಸಂಶಯಗಳ ಬಗ್ಗೆ ರಾಜ್ಯಪಾಲರು ವಿವರಣೆ ಪಡೆದರೆನ್ನಲಾಗಿದೆ. ಈ ಸಂದರ್ಭದಲ್ಲಿ ಕಾನೂನು ತಜ್ಞರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದು, ಅವರ ನಡುವೆ ನಡೆದ ಕಲಾಪದ ಪೂರ್ಣ ವಿವರ ಲಭ್ಯವಾಗಿಲ್ಲ.

ರಾಜ್ಯಪಾಲರನ್ನು ಭೇಟಿ ಮಾಡಿ ರಾಜಭವನದಿಂದ ಹೊರಬಂದ ಅಬ್ರಹಾಂ, ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುತ್ತಾರೆಂಬ ವಿಶ್ವಾಸವಿದೆ. ಭೇಟಿ ಸಂದರ್ಭದಲ್ಲಿ ನಾನು ಸಾಕಷ್ಟು ವಿವರಣೆ ನೀಡಿದ್ದೇನೆ, ಅದಕ್ಕೆ ರಾಜ್ಯಪಾಲರಿಂದ ನ್ಯಾಯ ದೊರೆಯಲಿದೆ ಎಂದಿದ್ದಾರೆ.

ನನ್ನಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಕೇಳುತ್ತಾರೆ ಎಂದರೆ, ಅವರಿಗೆ ಇದನ್ನು ಮುಂದುವರೆಸಲು ಆಸಕ್ತಿ ಇದೆ ಎಂದಲ್ಲವೇ? ನನ್ನ ವಿರುದ್ಧ ಮುಖ್ಯಮಂತ್ರಿ ಹಾಗೂ ಸಂಪುಟ ಕೆಲವು ಆರೋಪಗಳನ್ನು ಮಾಡಿದೆ, ಅದಕ್ಕೆ ಸಂಬಂಧಿಸಿದಂತೆಯೂ ನಾನು ಸ್ಪಷ್ಟನೆ ನೀಡಿದ್ದೇನೆ ಎಂದು ಹೇಳಿದರು.

ನನ್ನ ವಿರುದ್ಧ ರಾಜ್ಯದ ಯಾವುದೇ ಭಾಗ ದಲ್ಲಿ ಯಾವುದೇ ದೂರು ಇಲ್ಲ, ನಾನು ಸರ್ಕಾ ರಕ್ಕೆ ಸವಾಲು ಹಾಕುತ್ತೇನೆ, ಪ್ರಕರಣ ದಾಖಲಾ ಗಿದ್ದರೆ ಅದನ್ನು ಹುಡುಕಿಕೊಡಲಿ ಎಂದರು.

ಇದಕ್ಕೂ ಮುನ್ನ ಮುಡಾ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಂದಿರುವ ಆರೋಪಕ್ಕೆ ರಾಜ್ಯಪಾಲರು ಎರಡನೇ ದಿನವಾದ ಇಂದೂ ಅಧಿಕಾರಿಗಳು ಮತ್ತು ಕಾನೂನು ತಜ್ಞರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಕರ್ನಾಟಕದ ಅಡ್ವೋಕೇಟ್ ಜನರಲ್ ಆಗಿ ಸೇವೆ ಸಲ್ಲಿಸಿದ್ದ ಹಿರಿಯ ನ್ಯಾಯವಾದಿ ಹಾಗೂ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ರೊಬ್ಬರನ್ನು ರಾಜಭವನಕ್ಕೆ ಕರೆಸಿಕೊಂಡು ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ನೀಡಿ ರುವ ಉತ್ತರಗಳ ಬಗ್ಗೆ ಕೂಲಂಕುಶ ಪರಿಶೀಲನೆ ನಡೆಸಿ, ಅಧಿಕಾರಿಗಳ ಸಮ್ಮುಖದಲ್ಲೇ ಕೆಲವು ಮಾಹಿತಿ ಪಡೆದುಕೊಂಡರು.

ಇದಾದ ನಂತರ ರಾಜ್ಯಪಾಲರಿಗೆ ಪ್ರಕರಣ ಸಂಬಂಧ ಎದುರಾದ ಸಂಶಯಗಳ ಬಗ್ಗೆಯೂ ಕಾನೂನು ತಜ್ಞರೊಂದಿಗೆ ಮತ್ತೊಂದು ಸುತ್ತಿನ ಚರ್ಚೆ ನಡೆಸಿದರು.

ರಾಜಭವನ ನೀಡಿದ ನೋಟಿಸ್‌ಗೆ ಸರ್ಕಾರ ಪ್ರತ್ಯೇಕವಾಗಿ ಮೂರು ಸಮಜಾಯಿಷಿ ನೀಡಿದೆ, ಅದರಲ್ಲಿ ಮುಖ್ಯಮಂತ್ರಿ ಅವರು, ಸ್ವಯಂ ಪ್ರೇರಿತವಾಗಿ 60 ಪುಟಗಳ ಉತ್ತರ ಹಾಗೂ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನ ಹಾಗೂ ಮನವಿ ಕುರಿತು ಇಡೀ ದಿನ ಪರಿಶೀಲನೆ ಮತ್ತು ಚರ್ಚೆಯೇ ನಡೆಯಿತು.

ತದ ನಂತರ ಪ್ರಮುಖ ದೂರುದಾರ, ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅವರನ್ನು ಸಂಪರ್ಕಿಸಿದ ರಾಜಭವನ, ಮಧ್ಯಾಹ್ನ 3 ಗಂಟೆಗೆ ರಾಜ್ಯಪಾಲರನ್ನು ಭೇಟಿ ಮಾಡುವಂತೆ ಸೂಚಿಸಿತು. ರಾಜಭವನಕ್ಕೆ ಆಗಮಿಸಿದ ಅಬ್ರಹಾಂ ಅವರಿಂದ, ರಾಜ್ಯ ಪಾಲರು ಮತ್ತು ಕಾನೂನು ತಜ್ಞರು ತಮ್ಮಲ್ಲಿ ಮೂಡಿದ್ದ ಸಂಶಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಣೆ ಪಡೆದುಕೊಂಡರು.

## ಮುಂಬೈ ಕಾಲೇಜಿನ ಹಿಜಾಬ್ ನಿಷೇಧದ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ

ನವದೆಹಲಿ, ಆ. 6 - ಮುಂಬೈ ಕಾಲೇಜಿನ ಕ್ಯಾಂಪಸ್‌ನಲ್ಲಿ ಹಿಜಾಬ್, ಬುರ್ಖಾ ಹಾಗೂ ನಕಾಬ್ ನಿಷೇಧಿಸಿರುವುದನ್ನು ಪ್ರಶ್ನಿಸಿ ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಈ ನಿಷೇಧ ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಆದರೆ, ಕಳೆದ ಜೂನ್ 26ರಂದು ತೀರ್ಪು ನೀಡಿದ್ದ ಹೈಕೋರ್ಟ್, ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿತ್ತು.

ಚೆಂಬೂರು ಟ್ರಾಂಬೆ ಎಜುಕೇಷನ್ ಸೊಸೈಟಿಯ ಎನ್.ಜಿ. ಆಚಾರ್ಯ ಹಾಗೂ ಡಿ.ಕೆ. ಮರಾಠೆ ಕಾಲೇಜುಗಳಲ್ಲಿ ಹೇರಲಾಗಿರುವ ನಿಷೇಧ ವಿದ್ಯಾರ್ಥಿಗಳ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಲು ಸಮವಸ್ತ್ರ ಜಾರಿಗೆ ತರಲಾಗಿದೆ. ಸಮವಸ್ತ್ರ ಜಾರಿಗೆ ತರುವುದು ಕಾಲೇಜಿನ ಹಕ್ಕಾಗಿದೆ ಎಂದು ಹೈಕೋರ್ಟ್ ತೀರ್ಪಿನಲ್ಲಿ ತಿಳಿಸಲಾ ಗಿತ್ತು. ಈ ತೀರ್ಪು ಪ್ರಶ್ನಿಸಿ ದಾಖಲಿಸಿರುವ ಅರ್ಜಿಯನ್ನು ವಿಚಾರಣೆಗೆ ಒಳಪಡಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯ ಮೂರ್ತಿಗಳಾದ ಜೆ.ಬಿ ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಈ ಅರ್ಜಿಯ ವಿಚಾರಣೆಗಾಗಿ ಪೀಠವೊಂದನ್ನು ಈಗಾಗಲೇ ಗುರುತಿಸಲಾಗಿದ್ದು, ಶೀಘ್ರದಲ್ಲೇ ವಿಚಾರಣೆಗೆ ಅರ್ಜಿ ರವಾನಿಸಲಾಗುವುದು ಎಂದು ತಿಳಿಸಲಾಗಿದೆ.

## ರಾಷ್ಟ್ರ ಮಟ್ಟದ ಕರಾಟೆಯಲ್ಲಿ ಜಿಲ್ಲೆಗೆ 11 ಬಂಗಾರ



ದಾವಣಗೆರೆ, ಆ.6 - ಗದಗಿನಲ್ಲಿ ಈಚೆಗೆ ನಡೆದ 3ನೇ ರಾಷ್ಟ್ರ ಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ, ನಗರದ ವೈ.ಆರ್.ಪಿ ಕರಾಟೆ ಆ್ಯಂಡ್ ಸೆಲ್ಫ್ ಡಿಫೆನ್ಸ್ ಸ್ಕೂಲಿನ 11 ವಿದ್ಯಾರ್ಥಿಗಳು ಕತಾ ಮತ್ತು ಕುಮಿತೆ ವಿಭಾಗದಲ್ಲಿ ಭಾಗವಹಿಸಿ 11 ಬಂಗಾರ, 4 ಬೆಳ್ಳಿ ಹಾಗೂ 7 ಕಂಚಿನ ಪದಕ ಪಡೆದಿದ್ದಾರೆ.

## ದಾಖಲೆ ಬರೆದ ವಿನೇಶ್

**(1ನೇ ಪುಟದಿಂದ)** 5 ವರ್ಷ ಕಾಲ ಅವರು 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಒಲಂಪಿಕ್ ಅರ್ಹತಾ ಪಂದ್ಯಾವಳಿಗಳ ಅವಧಿಯಲ್ಲಿ ಅವರು 50 ಕೆ.ಜಿ. ತೂಕದಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದರು. ಅವರು ಮೊಣಕಾಲ ಶಸ್ತ್ರಚಿಕಿತ್ಸೆಗೂ ಒಳಗಾದ ಕಾರಣ, ಇದೆಲ್ಲವೂ ಸುಲಭವಾಗಿರಲಿಲ್ಲ.

ದೆಹಲಿಯ ಬೀದಿಗಳಲ್ಲಿ ನಡೆಸಿದ ಹೋರಾಟದಿಂದ ಹಿಡಿದು, ಪ್ಯಾರಿಸ್ ವೇದಿಕೆಯಲ್ಲಿ ದಿಟ್ಟ ಪ್ರದರ್ಶನ ನೀಡುವವರೆಗೆ ಅವರು ಸಾಗಿ ಬಂದ ಹಾದಿ ಸುದೀರ್ಘ ಹಾಗೂ ಕಠಿಣವಾದದ್ದು. ಈಗ ಕನಿಷ್ಠ ಬೆಳ್ಳಿ ಪದಕವನ್ನು ಖಾತರಿ ಪಡಿಸಿಕೊಂಡಿರುವ ಅವರು, ಬಂಗಾರದ ಮೇಲೆ ಗುರಿ ಇಟ್ಟಿದ್ದಾರೆ.

ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಬೆದರಿಕೆ ಹಾಗೂ ಲೈಂಗಿಕ ಪೀಡನೆಯ ಆರೋಪ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ, ಸಿಂಗ್ ವಿರುದ್ಧದ ಹೋರಾಟದಲ್ಲಿ ವಿನೇಶ್ ಸಕ್ರಿಯವಾಗಿ ಭಾಗಿಯಾಗಿದ್ದರು. ಇದು ಅವರಿಗೆ ಸಾಕಷ್ಟು ಸಮಸ್ಯೆ ತಂದಿತ್ತು.

ಪೊಲೀಸ್, ಕೋರ್ಟ್ ಹಾಗೂ ಸರ್ಕಾರವೂ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿತ್ತು. ಆದರೆ, ಈ ಎಲ್ಲ ಸಮಸ್ಯೆಗಳು ವಿನೇಶ್ ಅವರನ್ನು ಇನ್ನಷ್ಟು ಗಟ್ಟಿಗೊಳಿಸಿದ್ದವು. ಹೀಗಾಗಿ ಅವರು ಗಳಿಸಿರುವ ಪದಕ ಇನ್ನಷ್ಟು ಅಮೂಲ್ಯವಾಗಿದೆ ಹಾಗೂ ಮಹತ್ವ ಪಡೆದಿದೆ.

ಹರಿಯಾಣದ ವಿನೇಶ್, ಬಾಲ್ಯದಲ್ಲಿ ಕುಸ್ತಿ ವಲಯಕ್ಕೆ ಕಾಲಿಡುವುದಕ್ಕೆ ವಿರೋಧ ವ್ಯಕ್ತವಾಗಿತ್ತು. ಕುಸ್ತಿ ಮಹಿಳೆಯರ ಆಟವಲ್ಲ ಎಂದು ಅವರನ್ನು ತಡೆಯಲು ಪ್ರಯತ್ನಿಸಲಾಗಿತ್ತು. ಕೇವಲ 9 ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡಿದ್ದರು. ಕ್ರೀಡೆಗೆ ಕಾಲಿರಿಸಿದಾಗ ಕುಸ್ತಿ ಒಕ್ಕೂಟದ ಬಲಿಷ್ಠ ಅಧಿಕಾರಿಗಳನ್ನು ಎದುರಿಸ ಬೇಕಾಯಿತು. ಹೀಗಾಗಿ ವಿನೇಶ್, ವ್ಯವಸ್ಥೆ ಹಾಗೂ ಕ್ರೀಡೆ ಎರಡೂ ಹಂತಗಳಲ್ಲಿ ಹೋರಾಟ ನಡೆಸಿದ್ದಾರೆ ಎಂಬುದು ಅವರ ಜೀವನದ ಕಥೆ ತಿಳಿಸುತ್ತಿದೆ.

## ಸತ್ತ ಮೇಲೂ ಸಮಾಜ ಸೇವೆ ಮಾಡಿ

ದಾವಣಗೆರೆ, ಆ.6- ಪ್ರತಿ ವರ್ಷವು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವದಲ್ಲಿ ದೇಹ ದಾನಿಗಳ ಕುಟುಂಬದ ಸದಸ್ಯರಿಗೆ ಪ್ರಶಂಸಾ ಪತ್ರ ನೀಡಿ ಗೌರವಿಸಬೇಕೆಂದು ರಾಜ್ಯ ಆರೋಗ್ಯ ಇಲಾಖೆ ಹೊರಡಿಸಿದ ಸುತ್ತೋಲೆ ಶ್ಲಾಘನೀಯವಾಗಿದೆ.

ಸರ್ಕಾರದ ಈ ನಡೆ ದೇಹ ದಾನಿಗಳ ಕುಟುಂಬಕ್ಕೆ ಕೃತಜ್ಞತೆ ಸಲ್ಲಿಸುವ ಜತೆಗೆ ದೇಹ ದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿಯೂ ಸಹಕಾರಿಯಾಗುತ್ತದೆ.

ಸಹಜ ಮರಣದಿಂದ ಮಾತ್ರ ನೇತ್ರದಾನ ಮತ್ತು ದೇಹದಾನ ಸಾಧ್ಯ. ಈ ನಿಟ್ಟಿನಲ್ಲಿ ದೇಹ ದಾನ ಮಾಡುವುದು ಅತ್ಯಂತ್ರ ಪವಿತ್ರ ಹಾಗೂ ಸಮಾಜಕ್ಕೆ ಪ್ರಯೋಜನಕಾರಿಯಾದ ನಿಸ್ವಾರ್ಥ ಸೇವೆಯಾಗಿದೆ.

ದಾನ ಮಾಡಿದ ಅಂಗಾಂಗಗಳು ಇತರರ ಜೀವ ಉಳಿಸಲು ಅಥವಾ ಜೀವನ ಸುಧಾರಿಸಲು ಸಹಕಾರಿ ಆಗುತ್ತವೆ. ಅಲ್ಲದೇ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಹಾಗೂ ಸಂಶೋಧನೆಗೆ ನೆರವಾಗಲಿದೆ.

ಸತ್ತ ನಂತರ ಮಣ್ಣಲ್ಲಿ ಮಣ್ಣಾಗುವ ಬದಲು, ದೇಹದಾನ ಮಾಡಿದರೆ ಸಮಾಜಕ್ಕೆ ಸಹಕಾರಿಯಾಗುತ್ತದೆ. ಆದ್ದರಿಂದ ಯಾರಾದರೂ ಸತ್ತ ನಂತರ ತಮ್ಮ ದೇಹದಾನ ಮಾಡಲು ಬಯಸಿದ್ದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟಿಗೆ ಸಂಪರ್ಕಿಸಿದರೆ ಸರಿಯಾದ ಮಾಹಿತಿ ಒದಗಿಸಲಿದ್ದೇವೆ. ಮಾಹಿತಿಗಾಗಿ 9886645880 ಸಂಪರ್ಕಿಸಿ.

## ಎದೆಹಾಲನ್ನು ಕಾರ್ಖಾನೆಗಳಿಂದ ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ

ಮಲೇಬೆನ್ನೂರು, ಆ. 6 - ಸಾರಥಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮವನ್ನು ಟಿ ಹೆಚ್ ಒ ಡಾ ಅಬ್ದುಲ್ ಖಾದರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಗು ಜನಿಸಿದ ಒಂದು ಗಂಟೆಯೊಳಗೆ ತಾಯಿಯ ಎದೆ ಹಾಲನ್ನು ನೀಡಬೇಕು. ಕೊಲೆಸ್ಟ್ರಮ್‌ನಲ್ಲಿ ಅತಿ ಹೆಚ್ಚು ವಿಟಮಿನ್ ಎ ಮತ್ತು ರೋಗ ನಿರೋಧಕಗಳಿರುತ್ತವೆ. ಇದು ಶಿಶುವನ್ನು ಭೇದಿ ಧನುರ್ವಾಯು ಮತ್ತು ಶ್ವಾಸನಾಳದ ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ಪದೇಪದೇ ಎದೆ ಹಾಲು ನೀಡುವುದರಿಂದ ತಾಯಿಯ ಸ್ಥನಗಳಲ್ಲಿ ಗಂಟುಗಳಾಗದಂತೆ ರಕ್ಷಿಸುತ್ತದೆ. ನವಜಾತ ಶಿಶು ಎದೆಹಾಲನ್ನು ಹೀರುವುದರಿಂದ ಆಕ್ಸಿಟೋಸಿನ್ ಬಿಡುಗಡೆಗೆ ಸಹಾಯಕವಾಗುತ್ತದೆ. ಇದರಿಂದ ಗರ್ಭಕೋಶ ಕುಗ್ಗಿಗೆ ಸಹಾಯವಾಗಿ ಅದು ಪ್ರಸವೋತ್ತರ ರಕ್ತಸ್ರಾವವನ್ನು ತಡೆಯಲು ನೆರವಾಗುತ್ತದೆ ಎಂದು ಹೇಳಿದರು.

ಮಗುವಿನ ಉತ್ತಮ ಬೆಳವಣಿಗೆಗೆ ಹಾಗೂ ಉನ್ನತ ವ್ಯಕ್ತಿತ್ವ ರೂಪಿಸಲು ಎದೆ ಹಾಲು ಸಹಕಾರಿ. ಎದೆ ಹಾಲನ್ನು ಉಣಿಸುವಿಕೆ ತಾಯಿ ಮತ್ತು ಶಿಶುವಿನ ಬಾಂಧವ್ಯ ವೃದ್ಧಿಗೆ ಆಧಾರ ಸ್ತಂಭವಾಗಲಿದೆ ಎಂದರು.

ತಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿ, ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ನೀಡಬೇಕು. ಆರು ತಿಂಗಳ ನಂತರ ಎದೆ ಹಾಲಿನ ಜೊತೆಗೆ ಮೆದು ಪೂರಕ ಆಹಾರವನ್ನು ನೀಡುವುದರೊಂದಿಗೆ ಎರಡು ವರ್ಷಗಳ ಕಾಲ ಎದೆಹಾಲನ್ನು ಉಣಿಸುವುದು ಬಹು ಮುಖ್ಯವಾಗಿರುತ್ತದೆ ಎಂದರು.

ಸಭೆಯಲ್ಲಿ ತಿಪ್ಪೇಸ್ವಾಮಿ, ರಂಗನಾಥ, ಕಾವ್ಯ ಮತ್ತಿತರರು ಭಾಗವಹಿಸಿದ್ದರು.



## ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಗೆ ಅರ್ಜಿ ಸಲ್ಲಿಕೆ

ದಾವಣಗೆರೆ, ಆ.6- ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 31ರ ವರೆಗೆ ವಿಸ್ತರಿಸಲಾಗಿದೆ.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
(ಶ್ರಾವಣ ಮಾಸದ ಪ್ರಯುಕ್ತ ಕೇವಲ 5 ದಿವಸ ಮಾತ್ರ, ಈ ರೇಟ್)
50x80 ಪಶ್ಚಿಮ, ರೂ. 2,465/- ಅಡಿಗೆ.
40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್ ಬೇಕಾಗಿದ್ದಾರೆ.
ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಸಣ್ಣ ಉಳಿತಾಯ ಖಾತೆಯ ಮೂಲ ದಾಖಲೆ ಕಳೆದಿದೆ**
ಖಾತೆಯ ನಂ. ಎಂ.ಪಿ.ಕೆ.ಬಿ.ವೈ / Dvg 1904/03-04ರ ಶ್ರೀಮತಿ ಶಾಲಿನಿ ಕೆ.ಎನ್. w/o ಬಕ್ಕೇಶ್ ಹೆಸರಿನ ಸಣ್ಣ ಉಳಿತಾಯ ಖಾತೆಯ ಮೂಲ ದಾಖಲೆ ದಾವಣಗೆರೆಯಲ್ಲಿ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ಫೋನ್ ನಂಬರ್‌ಗೆ ಕರೆ ಮಾಡಲು ಕೋರಿದೆ.
9900748908, 90422 90898

**ಹುಡುಗರು ಬೇಕಾಗಿದ್ದಾರೆ**
ಗೋಡೌನಿನಲ್ಲಿ ಲೋಡ್-ಅನ್ ಲೋಡ್ ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
94817 74321

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್ 5ನೇ ಕ್ರಾಸ್‌ನಲ್ಲಿ ಕುಂದುವಾಡ ಕೆರೆ ಹತ್ತಿರ, 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ 2 ಬೆಡ್ ರೂಂನ ಮನೆ ಮಾರಾಟಕ್ಕಿದೆ.
ಮೊ : 97425 12125

**ಬೇಕಾಗಿದ್ದಾರೆ**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ನಲ್ಲಿರುವ ಮನೆಗೆ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
74063 96332

**ಬೇಕಾಗಿದ್ದಾರೆ**
1. Male - 1
2. Female - 1
92421 18010

**ಬೇಕಾಗಿದ್ದಾರೆ**
ದಾವಣಗೆರೆ ಆಂಜನೇಯ ಬಡಾವಣೆಯ 17ನೇ ಕ್ರಾಸ್ SRP ಸ್ಕೂಲ್ ಹತ್ತಿರದಲ್ಲಿರುವ HRH ಬಯೋಫರ್ಟಿಲೈಜರ್ಸ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ಲಭ್ಯವಿರುತ್ತದೆ.
96321 19811, 77952 60481

**WANTED**
Banking Sector Tele Caller
(Female Only)
Qualification : Any Degree
90715 55081
Interview Time : 11AM

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗಿದೆ**
ದಾವಣಗೆರೆ ಕರೂರು ಇಂಡಸ್ಟ್ರೀಯಲ್ ಏರಿಯಾದಲ್ಲಿ 5500 ಅಡಿವುಳ್ಳ ಇಂಡಸ್ಟ್ರೀಯಲ್ ಶೆಡ್ ಸುಸಜ್ಜಿತ ಆಫೀಸ್‌ನೊಂದಿಗೆ ಬಾಡಿಗೆಗೆ ಇದೆ.
93807 13883

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.8.2024ರ ಬುಧವಾರ
ದಿ.8.8.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಶಿವಮೊಗ್ಗ ಜಿಲ್ಲೆ ಸಾಗರ ಟೌನ್‌ನಲ್ಲಿ ಮಗುವನ್ನು ನೋಡಿಕೊಳ್ಳಲು ಸ್ತ್ರೀಯರು ಬೇಕಾಗಿದ್ದಾರೆ. ಸಂಪರ್ಕಿಸಿ:
99865 99923
91642 56425

**ಮನೆ ಬಾಡಿಗೆಗೆ ಇದೆ**
40x44 ಅಳತೆಯುಳ್ಳ 2BHK ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ. #992 ಲಾಯರ್ ರೋಡ್, ಕೆ.ಬಿ. ಬಡಾವಣೆಯ, ದಾವಣಗೆರೆ-2, ಆಸಕ್ತರು ಸಂಪರ್ಕಿಸಿ :
85533 24486

**ಕೆಲಸಕ್ಕೆ ಬೇಕಾಗಿದ್ದಾರೆ**
1) ANM/GNM, ನರ್ಸಿಂಗ್ - 01
2) ಅಡುಗೆ ಕೆಲಸ - 01
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 12929
08192-252228

**ಹುಡುಗರು ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್
ಹದಡಿ ರಸ್ತೆ, ದಾವಣಗೆರೆ.
98446 49626, 90080 58121

**ಮಳಿಗೆ ಬಾಡಿಗೆಗಿದೆ**
Shop For Rent
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು,
ಗ್ರೌಂಡ್ ಫ್ಲೋರ್, 1400 ಚ.ಅ.,
1ನೇ ಮಹಡಿ - 1400 ಚ.ಅ.,
2ನೇ ಮಹಡಿ, 1400 ಚ.ಅ.
99022 79003

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಬಿಲ್ಡಿಂಗ್ ಎಲೆಕ್ಟ್ರಿಕಲ್ ಪ್ಲಂಬಿಂಗ್ & ಸೆಕ್ಯೂರಿಟಿ ಸ್ವಲ್ಪ ಅನುಭವ ಇರುವ ಹುಡುಗ ಬೇಕಾಗಿದ್ದಾರೆ. ಸಂಬಳ 10.000/- ದಿಂದ 14,000/- ಊಟಕ್ಕೆ 2000 ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
97400 98047

**ಬಿಲ್ಡಿಂಗ್ ಮಾರಾಟಕ್ಕಿದೆ**
12x70 ಇರುವ ಬಿಲ್ಡಿಂಗ್ ಮಂಡಿಪೇಟೆ, ದುರ್ಗಾ ಲಾಡ್ಜ್ ಎದುರು. ಸಂಪರ್ಕಿಸಿ :
99027 42652
94495 81118

**ಪಿಜಿ ಬಾಡಿಗೆಗಿದೆ**
BIET ಮುಖ್ಯ ರಸ್ತೆಯಲ್ಲಿ PG ಗೆ ಸೂಕ್ತವಾದ ಅಟ್ಯಾಚ್ ಬಾತ್ ರೂಂ ಇರುವ 9 ರೂಮುಗಳು ಬಾಡಿಗೆಗಿವೆ ಸಂಪರ್ಕಿಸಿ.
89707 77554

**ಬೇಕಾಗಿದ್ದಾರೆ**
✦ ಸೇಲ್ಸ್ ಗರ್ಲ್ಸ್
✦ ಸೇಲ್ಸ್ ಮೆನ್/ಸೀನಿಯರ್ ಸೇಲ್ಸ್ ಮೆನ್
✦ ಹೆಲ್ಪರ್ಸ್
✦ ಸ್ಟೋರ್ ಮ್ಯಾನೇಜರ್
✦ ಸ್ಟೋರ್ ಸೂಪರ್‌ವೈಸರ್
✦ ಕ್ಯಾಷಿಯರ್
ಆಕರ್ಷಕ ಸಂಬಳದ ಜೊತೆಗೆ ಇನ್‌ಸೆಂಟಿವ್
ಸಂಪರ್ಕಿಸಿ :
ಮುಗ್ಧ ರೇಷ್ಮೆ & ಸೀರೆಗಳು
ಡೆಂಟಲ್ ಕಾಲೇಜ್ ಮೇನ್ ರೋಡ್ ದಾವಣಗೆರೆ.
ಫೋ. : 83411 18970
www.mugdha.co

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ**
ಕೊಟ್ಟೂರು ರಸ್ತೆ,ಹರಪನಹಳ್ಳಿ-583131, ವಿಜಯನಗರ ಜಿಲ್ಲೆ.
e-mail:-apmchphalli1997@gmail.com
ಫೋ. : 08398-295006
ಸಂಖ್ಯೆ:ಕೃಮಾಇ/ಕೃಉಮಾಸ/ಹಹಳ್ಳಿ/ಅಭಿವೃದ್ಧಿ/ 85 /2024-25
ದಿನಾಂಕ : 05.08.2024
**ಪ್ರಕಟಣೆ**
ಹರಪನಹಳ್ಳಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶ್ರೀ ಪಿ.ಕೆ. ಮುರುಗೇಶ, ಮಾ|| ಶ್ರೀ ಮುರುಘರಾಜೇಂದ್ರ ಟ್ರೇಡರ್ಸ್ ಎ.ಪಿ.ಎಂ.ಸಿ. ಯಾರ್ಡ್, ಹರಪನಹಳ್ಳಿ ಇವರಿಗೆ ನಿವೇಶನ ಸಂಖ್ಯೆ:24ನ್ನು ನಿಯಮಾನುಸಾರ ಲೀಸ್-ಕಂ-ಸೇಲ್ ಮೂಲಕ ಹಂಚಿಕೆ ಮಾಡಲಾಗಿದ್ದು, ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದ ಹಂಚಿಕೆದಾರರಾದ ಪಿ.ಕೆ.ಮುರುಗೇಶ ಇವರು ದಿನಾಂಕ:27-08-2022 ರಂದು ಮೃತ ಪಟ್ಟಿರುತ್ತಾರೆ. ಮೃತರ ಪತ್ನಿಯಾದ ಶ್ರೀಮತಿ ಹೆಚ್.ಸರೋಜ ಇವರು ಪೋತಿ ವಾರಸು ಪ್ರಕಾರ ನಿವೇಶನ ಸಂಖ್ಯೆ:24ರಲ್ಲಿನ ಕಟ್ಟಡ ಸಹಿತ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ, ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ನಿವೇಶನ ಸಹಿತ ಕಟ್ಟಡದ ಖಾತೆಯನ್ನು ಅರ್ಜಿದಾರರಿಗೆ ವರ್ಗಾವಣೆ ಮಾಡುವ ಬಗ್ಗೆ ಯಾವುದೇ ರೈತ ಮಾರಾಟಗಾರರು/ಪೇಟೆ ಕಾರ್ಯಕರ್ತರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ, ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಕಾರ್ಯದರ್ಶಿ
ಕೃ.ಉ.ಮಾ.ಸ.,ಹರಪನಹಳ್ಳಿ.

**ಹೆಣ್ಣು ಮಕ್ಕಳು ಬೇಕಾಗಿದ್ದಾರೆ**
ವಿದ್ಯಾನಗರ, 1ನೇ ಬಸ್ ಸ್ಟಾಪ್‌ನಲ್ಲಿ ಹಾಸಿಗೆ ಹಿಡಿದಿರುವ ವಯಸ್ಸಾದ ಹೆಣ್ಣುಮಗಳನ್ನು ನೋಡಿಕೊಂಡು ಮತ್ತು ಮನೆ, ಅಡುಗೆ ಮಾಡುವಂತಹ ಹೆಣ್ಣುಮಕ್ಕಳು ತಕ್ಷಣ ಬೇಕಾಗಿದ್ದಾರೆ.
ಸಂಬಳ 7500 ರಿಂದ 8000 ರೂ.ಗಳು
94486 79324

**ಸೈಟು/ಮನೆ/ಹೊಲ ಬೇಕಾಗಿದೆ**
ಸಂಪರ್ಕಿಸಿ :
89707 10578

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಎಸ್.ಎಸ್. ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ಬಿ ಬ್ಲಾಕ್, ದಾವಣಗೆರೆ.
99861 62462

**ಬೇಕಾಗಿದ್ದಾರೆ**
ಕೌಂಟರ್ ನೋಡಿಕೊಳ್ಳಲು ಬೇಕಾಗಿದ್ದಾರೆ.
ಸಂಪರ್ಕಿಸಿ :
ಸವಿ ಪೇಸ್ಟ್ರೀಸ್ (ಕೇಕ್ ಶಾಪ್)
80956 52555

**REQUIRED**
Lady candidate for office work, Skill: Basic Computer with Photo-shop/ DTP/Accounting
PJ Extension, Davanagere
99006 66122

**WANTED**
ಬೇಕಾಗಿದ್ದಾರೆ
Staff Nurse ಸ್ಟಾಫ್ ನರ್ಸ್
97391 19466
95350 75273

**3 BHK HOUSE FOR RENT/LEASE**
At Uttam Badavane, 1st main, B ward No - 30, Avaragere Road. Contact :
99015 64535
94498 04535

**OFFICE SPACE FOR RENT**
1000 Sqft, 1st floor, 9th main, P.J. Extn. Davanagere.
98444 93755

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ನ್ಯಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ನಂ.1 ವಶೀಕರಣಂ**
ನೀವು ಇಷ್ಟ ಪಟ್ಟ ಸ್ತ್ರೀ ಪುರುಷ, ಅತ್ತೆ, ಸೊಸೆ ಕಿರಿಕಿರಿ, ಮದುವೆ ವಿಳಂಬ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ ಸಂಭೋಗ ಮೋಹಿನಿ ಮತ್ತು ಕಾಮೇಶ್ವರಿ ಮಂತ್ರದಿಂದ
100% ಪರಿಹಾರ ಶತಃಸಿದ್ಧ.
ಕೇವಲ 3 ದಿನಗಳಲ್ಲಿ ಫೋನಿನ ಮೂಲಕ ಪರಿಹಾರ.
ಮೊ : 99644 84508

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ಆರೋಗ್ಯ ವಿಮೆ : ಇಂಡಿಯಾ ಒಕ್ಕೂಟದ ಸಂಸತ್ ಸದಸ್ಯರಿಂದ ಪ್ರತಿಭಟನೆ



ದೆಹಲಿ, ಆ. 6 - ಆರೋಗ್ಯ ವಿಮೆಗೆ ಜಿಎಸ್‌ಟಿ ಹಾಕುವ ಮೂಲಕ ಮಧ್ಯಮ ವರ್ಗದವರ ಮೇಲೆ ಸವಾರಿ ಮಾಡುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಇಂಡಿಯಾ ಒಕ್ಕೂಟದ ಸಂಸತ್ ಸದಸ್ಯರು ಪ್ರತಿಭಟಿಸಿದರು.

ಕಾರ್ಮಿಕ ವರ್ಗದವರಿಗೆ ಇಎಸ್‌ಐ ಸೌಲಭ್ಯವಿದ್ದರೇ, ಬಡವರಿಗೆ ಬಿಪಿಎಲ್ ಕಾರ್ಡ್ ಮೂಲಕ ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ ಆರೋಗ್ಯ ಸೇವೆ ಸೌಲಭ್ಯವನ್ನು ಉಚಿತವಾಗಿ ನೀಡುತ್ತಿದ್ದು, ಮಧ್ಯಮ ವರ್ಗದವರು ತಮ್ಮ ಕುಟುಂಬದ ಆರೋಗ್ಯದ ಕಾಳಜಿಗಾಗಿ ಖಾಸಗಿ ಆರೋಗ್ಯ ವಿಮೆಯನ್ನು ನೆಚ್ಚಿಕೊಂಡಿವೆ. ಕೇಂದ್ರ ಸರ್ಕಾರ ಈಗ ಅದರ ಮೇಲೆ 18% ಜಿ.ಎಸ್.ಟಿ ಹಾಕುವ ಮೂಲಕ ಮಾಧ್ಯಮ ವರ್ಗದ ಜನರ ಮೇಲೆ ಸವಾರಿ ಮಾಡಲು ಹೊರಟಿದೆ ಎಂದು ಇಂಡಿಯಾ ಒಕ್ಕೂಟದ ಸಂಸತ್ ಸದಸ್ಯರು ಸಂಸತ್ ಭವನದ ಮುಂದೆ ಪ್ರತಿಭಟನೆ ನಡೆಸಿದರು.

# ಬಾಂಗ್ಲಾ ಸಂಸತ್ ವಿಸರ್ಜನೆ, ಹಂಗಾಮಿ ಸರ್ಕಾರಕ್ಕೆ ಸಿದ್ಧತೆ

ಢಾಕಾ, ಆ. 6 - ಬಾಂಗ್ಲಾ ದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಸಂಸತ್ತನ್ನು ವಿಸರ್ಜಿಸಿದ್ದು, ಹೊಸ ಚುನಾವಣೆಗೆ ದಾರಿ ಮಾಡಿಕೊಟ್ಟಿದ್ದಾರೆ. ಪ್ರಧಾನಮಂತ್ರಿ ಸ್ಥಾನಕ್ಕೆ ಶೇಖ್ ಹಸೀನಾ ಅವರು ರಾಜೀನಾಮೆ ನೀಡಿ ದೇಶದಿಂದ ಪಲಾಯನ ಮಾಡಿದ ನಂತರ ಹಂಗಾಮಿ ಸರ್ಕಾರ ರಚನೆಯ ಕ್ರಮಗಳಿಗೂ ಚಾಲನೆ ದೊರೆತಿದೆ.

ಸೋಮವಾರದಂದು ಸೈನ್ಯ ದೇಶದ ಚುಕ್ಕಾಣಿ ಹಿಡಿದಿದೆ. ಹಸೀನಾ ರಾಜೀನಾಮೆ ನಂತರ ಉಂಟಾದ ಅರಾಜಕತೆ ನಡುವೆ ಹಿಂಸಾಚಾರ ಭುಗಿಲೆದ್ದಿತ್ತು. ಕಳೆದ ಕೆಲ ವಾರಗಳಲ್ಲಿ ಹಿಂಸಾಚಾರದಿಂದ ಮೃತರಾದವರ ಸಂಖ್ಯೆ 440ಕ್ಕೆ ಏರಿಕೆಯಾಗಿದೆ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಮಹಮ್ಮದ್ ಯೂನಸ್ ಅವರು ಹಂಗಾಮಿ ಸರ್ಕಾರದ ನೇತೃತ್ವ ವಹಿಸಬೇಕು ಎಂಬ ಬೇಡಿಕೆ ಕೇಳಿ ಬಂದಿದ್ದು, ಈ ಜವಾಬ್ದಾರಿ ವಹಿಸಿಕೊಳ್ಳಲು ಸಿದ್ಧವಿರುವುದಾಗಿ ಯೂನಸ್ ಹೇಳಿದ್ದಾರೆ.

ಬಾಂಗ್ಲಾದಲ್ಲಿ ನಡೆದ ಹಿಂಸಾಚಾರದಲ್ಲಿ ಹಿಂದೂ ದೇವಾಲಯಗಳು, ಹಿಂದೂಗಳ ಮನೆಗಳು ಹಾಗೂ ಉದ್ಯಮಗಳನ್ನು ಧ್ವಂಸಗೊಳಿಸಲಾಗಿದೆ ಮತ್ತು ಮಹಿಳೆಯರ ಮೇಲೆ ಹಲ್ಲೆ ನಡೆಸಲಾಗಿದೆ. ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಜೊತೆ ಗುರುತಿಸಿಕೊಂಡಿದ್ದ ಇಬ್ಬರು ಹಿಂದೂ ನಾಯಕರನ್ನು ಹತ್ಯೆ ಮಾಡಲಾಗಿದೆ.

ಈ ನಡುವೆ ಅಧ್ಯಕ್ಷ ಶಹಾಬುದ್ದೀನ್ ಅವರು ವಿದ್ಯಾರ್ಥಿ ಸಂಘಟನೆಗಳ ಹೋರಾಟದಲ್ಲಿ ಮುಖಂಡರಾಗಿದ್ದವರನ್ನು ಭೇಟಿ ಮಾಡಿ ದೇಶದ ಪರಿಸ್ಥಿತಿ ಕುರಿತು ಚರ್ಚಿಸಿದ್ದಾರೆ. ಅಧ್ಯಕ್ಷರ ಜೊತೆ ನಡೆದ ಸಭೆಯಲ್ಲಿ ಸೈನಿಕ ಪಡೆಗಳ ಮೂವರು ಮುಖ್ಯಸ್ಥರು ಸಹ ಉಪಸ್ಥಿತರಿದ್ದರು. ಈ ಸಭೆ ಹಂಗಾಮಿ ಸರ್ಕಾರದ ರೂಪುರೇಷೆಯನ್ನು ನಿರ್ಧರಿಸಿದೆ.

ರಾಜೀನಾಮೆ ನಂತರ ಭಾರತಕ್ಕೆ ಬಂದಿದ್ದ ಹಸೀನಾ, ಬ್ರಿಟನ್‌ಗೆ ತೆರಳಲು ಬಯಸಿದ್ದರು. ಆದರೆ ಕೆಲ ತೊಂದರೆಗಳು ಎದುರಾದ ಹಿನ್ನೆಲೆಯಲ್ಲಿ ಇನ್ನು ಸ್ವಲ್ಪ ದಿನ ಅವರು ಭಾರತದಲ್ಲಿ ಉಳಿದುಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಾಂಗ್ಲಾದೇಶದಲ್ಲಿ ಬಸ್ ಹಾಗೂ ಇತರೆ ಸಾರಿಗೆ ವಾಹನಗಳ ಸಂಚಾರ ಪುನರಾರಂಭವಾಗಿದೆ. ಅಂಗಡಿ ಹಾಗೂ ಸರ್ಕಾರಿ ಕಚೇರಿಗಳು ತೆರೆದಿವೆ. ಆದರೆ ಸಚಿವಾಲಯಗಳಲ್ಲಿ ಹಾಜರಾದ ಉದ್ಯೋಗಿಗಳಲ್ಲಿ ಅನಿಶ್ಚಿತತೆ ಕಂಡು ಬಂದಿದೆ ಎಂದು ವರದಿಗಳು ತಿಳಿಸಿವೆ.

ಸೋಮವಾರದ ಹಿಂಸಾಚಾರದಲ್ಲಿ ನೂರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಕಳೆದ 21 ದಿನಗಳಲ್ಲಿ ಬಾಂಗ್ಲಾದಲ್ಲಿ ಉಂಟಾದ ಸಂಘರ್ಷಗಳಲ್ಲಿ 440ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಎಂದೂ ವರದಿಗಳು ತಿಳಿಸಿವೆ.

ಅಧ್ಯಕ್ಷರು ಸಂಸತ್ ವಿಸರ್ಜನೆ ಮಾಡಿರುವುದರಿಂದ ಹೊಸ ಚುನಾವಣೆಗೆ ದಾರಿ ತೆರವಾಗಿದೆ. ಕಳೆದ ಜನವರಿ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಹಸೀನಾ ನಾಲ್ಕನೇ ಬಾರಿ ಪುನರಾಯ್ಕೆಯಾಗಿದ್ದರು. ಆದರೆ ಈ ಚುನಾವಣೆಗೆ



**ಸರ್ಕಾರದ ಜವಾಬ್ದಾರಿಗೆ ಸಿದ್ಧ ಎಂದ ನೊಬೆಲ್ ಪುರಸ್ಕೃತ ಯೂನಸ್**

ಪ್ರತಿಪಕ್ಷಗಳು ಬಹಿಷ್ಕಾರ ಹಾಕಿದ್ದವು.

ವಿದ್ಯಾರ್ಥಿ ಸಂಘಟನೆಗಳ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ನಹೀದ್ ಇಸ್ಲಾಂ ಹೇಳಿಕೆಯೊಂದನ್ನು ನೀಡಿದ್ದು, ನೊಬೆಲ್ ಪ್ರಶಸ್ತಿ ಪುರಸ್ಕೃತ ಯೂನಸ್ ಅವರು ಹಂಗಾಮಿ ಸರ್ಕಾರದ ಮುಖ್ಯಸ್ಥರಾಗಲಿ ಎಂದು ಹೇಳಿದ್ದಾರೆ.

ನಾನು ಯೂನಸ್ ಜೊತೆ ಈಗಾಗಲೇ ಚರ್ಚೆ ನಡೆಸಿದ್ದು, ಬಾಂಗ್ಲಾದೇಶ ರಕ್ಷಣೆಯ ಹೊಣೆ ಹೊರಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಇವರ ಹೊರತಾಗಿ ಬೇರೆ ಯಾರ ಸರ್ಕಾರವನ್ನು ವಿದ್ಯಾರ್ಥಿಗಳು ಒಪ್ಪಿಕೊಳ್ಳುವುದಿಲ್ಲ. ಸೈನಿಕ ಸರ್ಕಾರ, ಇಲ್ಲವೇ ಸೈನ್ಯ ಬೆಂಬಲಿತ ಸರ್ಕಾರ ಇಲ್ಲವೇ ಫ್ಯಾಸಿಸ್ಟ್ ಬೆಂಬಲಿತ ಸರ್ಕಾರವನ್ನು ನಾವು ಒಪ್ಪುವುದಿಲ್ಲ ಎಂದು ನಹೀಬ್ ಹೇಳಿದ್ದಾರೆ.

ಯೂನಸ್ ಪ್ರಸಕ್ತ ದೇಶದಿಂದ ಹೊರಗಿದ್ದಾರೆ. ಆದರೆ ಹಸೀನ ಆಡಳಿತದ ಪದಚ್ಯುತಿ ಬೆಂಬಲಿಸಿದ್ದು, ಇದು ದೇಶಕ್ಕೆ ದೊರೆತ ಎರಡನೇ ಸ್ವಾತಂತ್ರ್ಯ ಎಂದು ಬಣ್ಣಿಸಿದ್ದಾರೆ. ಬಡತನದ ವಿರುದ್ಧ ಹೋರಾಟಕ್ಕಾಗಿ ಯೂನಸ್ ಅವರು ಗ್ರಾಮೀಣ ಬ್ಯಾಂಕ್ ಆರಂಭಿಸಿದ್ದರು. ಈ ಮಾದರಿಯ ಬ್ಯಾಂಕುಗಳು ಈಗ ವಿಶ್ವದಾದ್ಯಂತ ಹರಡಿದೆ. ಅವರ ಈ ಸಾಧನೆಗಾಗಿ 2006ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಗಿತ್ತು.

ಈ ಹಿಂದೆ ಹಸೀನಾ ಸರ್ಕಾರದ ಜೊತೆ ಯೂನಸ್ ಸಂಘರ್ಷಕ್ಕೆ ಸಿಲುಕಿದ್ದರು. ಅಸ್ಪಷ್ಟ ಕಾರಣಗಳಿಗಾಗಿ ಅವರ ವಿರುದ್ಧ ಅಧಿಕಾರಿಗಳು ತನಿಖೆ ನಡೆಸಿದ್ದರು. ಅವರ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿತ್ತು ಹಾಗೂ ಕಾರ್ಮಿಕ ಕಾಯ್ದೆ ಉಲ್ಲಂಘನೆ ಆರೋಪದ ಮೇಲೆ ಆರು ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಲಾಗಿತ್ತು.

ಈ ನಡುವೆ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ ಅಧ್ಯಕ್ಷೆ ಹಾಗೂ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರನ್ನು ಗೃಹ ಬಂಧನದಿಂದ ಬಿಡುಗಡೆ ಮಾಡಲಾಗಿದೆ. ಅವರು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಾರೆ.

ಜುಲೈ 1ರ ನಂತರ ಬಂಧನಕ್ಕೊಳಗಾದವರನ್ನು ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಈಗಾಗಲೇ ಹಲವರನ್ನು ಬಿಡುಗಡೆ ಮಾಡಲಾಗಿದೆ ಎಂದು ಅಧ್ಯಕ್ಷರ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಜಿಲ್ಲಾ ವಕೀಲರ ಸಂಘಕ್ಕೆ ಹೈಕೋರ್ಟ್‌ನಿಂದ ಪ್ರಶಂಸಾ ಪತ್ರ

ದಾವಣಗೆರೆ, ಆ. 6 - ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಶೋಷಿತರು, ದಮನಿತರು, ಸಮಾಜದ ಕೆಳಸ್ತರದಲ್ಲಿರುವವರು ನ್ಯಾಯ ವಿತರಣೆಯಿಂದ ವಂಚಿತರಾಗಿದ್ದು, ಅವರಿಗೆ ಸೂಕ್ತ ಸಮಯದಲ್ಲಿ ನ್ಯಾಯ ವಿತರಣೆ ಮಾಡುವಲ್ಲಿ ವಕೀಲರ ಪಾತ್ರ ಪ್ರಮುಖವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಜಿಲ್ಲಾ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಜುಲೈನಲ್ಲಿ ನಡೆದ ಲೋಕ್‌ಅದಾಲತ್‌ನಲ್ಲಿ ಅತೀ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದಕ್ಕಾಗಿ ಏರ್ಪಡಿಸಲಾಗಿದ್ದ ವಕೀಲರಿಗೆ ಅಭಿನಂದನಾ ಸಮಾರಂಭ ಹಾಗೂ ಸೆಪ್ಟಂಬರ್‌ನಲ್ಲಿ ನಡೆಯಲಿರುವ ಲೋಕ್‌ಅದಾಲತ್ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಹೈಕೋರ್ಟ್ ಜಿಲ್ಲಾ ವಕೀಲರ ಸಂಘಕ್ಕೆ ಪ್ರಶಂಸಾ ಪತ್ರ ನೀಡಿ ಮಾತನಾಡಿದರು.

ಭಾರತದಲ್ಲಿ ಧರ್ಮ, ವರ್ಗ, ಜಾತಿ, ಲಿಂಗ ಹಾಗೂ ಲಿಂಗಭೇದವನ್ನು ಮೀರಿ ಜನತಾ ನ್ಯಾಯಾಲಯಗಳನ್ನು ನ್ಯಾಯ ದೇಗುಲಗಳೆಂದು ಭಾವಿಸಿದ್ದರೆ. ಅವರ ನಂಬಿಕೆಯನ್ನು ಉಳಿಸಲು ಅತ್ಯಂತ ಪರಿಣಾಮಕಾರಿಯಾಗಿ ನ್ಯಾಯಾಲಯಗಳು ವಕೀಲರ ಸಹಕಾರದೊಂದಿಗೆ ಕರ್ತವ್ಯ ನಿರ್ವಹಿಸಬೇಕಾಗಿದೆ ಎಂದು ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ ಅವರು ಮಾತನಾಡಿ, ಹಸಿದವರಿಗೆ ಅನ್ನ, ಕಷ್ಟದಲ್ಲಿರುವವರಿಗೆ ಸಹಾಯ, ತಪ್ಪು ಮಾಡಿದವರನ್ನು ಸರಿದಾರಿಗೆ ತರುವ ಮೂಲಕ ಸೋಲಿನಲ್ಲೂ ಧೈರ್ಯ, ಉತ್ಸಾಹ ತುಂಬುವ ಮೂಲಕ, ಕಕ್ಷಿದಾರರಿಗೆ ತಾಯಿ ಬೇರುಗಳಾಗಿ ವಕೀಲರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು. ಕಳೆದ ಲೋಕ್‌ಅದಾಲತ್‌ನಲ್ಲಿ 25 ಕುಟುಂಬಗಳನ್ನು ಒಂದು ಮಾಡುವ ಮೂಲಕ ಕೌಟುಂಬಿಕ ನ್ಯಾಯಾಲಯ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡಿ, ಭಾರತದಲ್ಲಿ ನ್ಯಾಯಾಂಗವು ಇಂದಿಗೂ ಜನತೆಯ ವಿಶ್ವಾಸ, ನಂಬಿಕೆಯನ್ನು ಉಳಿಸಿಕೊಂಡಿದ್ದು ಆ ನಿಟ್ಟಿನಲ್ಲಿ ನ್ಯಾಯಾಂಗದ ಭಾಗವಾಗಿರುವ ನ್ಯಾಯಾಧೀಶರು, ವಕೀಲರು ಮತ್ತು ನ್ಯಾಯಾಂಗ ಸಿಬ್ಬಂದಿ ಹೆಚ್ಚು ಹೊಣೆಗಾರಿಕೆಯಿಂದ ಕರ್ತವ್ಯ ನಿರ್ವಹಿಸಬೇಕಾಗಿದೆ. ಲೋಕ್ ಅದಾಲತ್‌ನಲ್ಲಿ ವಕೀಲರ ಸಹಕಾರದಿಂದ ಅತೀ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದು ಕರ್ನಾಟಕ ಹೈಕೋರ್ಟ್ ನೀಡಿರುವ ಪ್ರಶಂಸಾ ಪತ್ರ ದಾವಣಗೆರೆ ವಕೀಲರ ಸಮುದಾಯಕ್ಕೆ ಸಂದ ಗೌರವವಾಗಿದೆ ಎಂದು ಪ್ರತಿಪಾದಿಸಿದರು.

ಜಿಲ್ಲಾ ಸೇವಾ ಮತ್ತು ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ್ ಮ. ಕರೆಣ್ಣವರ, ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್‌ಕುಮಾರ್ ಆರ್.ಎನ್, ಮಕ್ಕಳ ಸ್ನೇಹಿ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗರೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ, ನ್ಯಾಯಾಧೀಶರಾದ ಶ್ರೀಮತಿ ರೇಷ್ಮಾ, ಅಮರ್ ವಿ.ಎಲ್., ಸಿ. ನಾಗೇಶ್, ಶ್ರೀಮತಿ ಗಾಯಿತ್ರಿ ಹೆಚ್.ಡಿ., ಮಲ್ಲಿಕಾರ್ಜುನ್, ಸಿದ್ಧರಾಜು, ನಾಜಿಯಾ ಕೌಸರ್ ಉಪಸ್ಥಿತರಿದ್ದರು.

ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳ್ ಸ್ವಾಗತಿಸಿದರು, ಕಾರ್ಯದರ್ಶಿ ಎಸ್. ಬಸವರಾಜ್ ನಿರೂಪಿಸಿದರು, ಕಾರ್ಯಕಾರಿ ಸಮಿತಿ ಸದಸ್ಯ ವಾಗೀಶ್ ಕಟಗಿಹಳ್ಳಿ ಮಠ, ಭಾಗ್ಯಲಕ್ಷ್ಮಿ ಆರ್., ಮಧುಸೂದನ್ ಟಿ.ಹೆಚ್., ರಾಘವೇಂದ್ರ ಎಂ., ಸಂತೋಷ್ ಕುಮಾರ್ ಜಿ.ಜೆ., ನಾಗರಾಜ್ ಎಲ್., ಕೆ.ಎಂ. ನೀಲಕಂಠಯ್ಯ, ಬಿ. ಅಜಯ್, ಎಂ. ಚೌಡಪ್ಪ, ಇನ್ನಿತರ ವಕೀಲರು ಪಾಲ್ಗೊಂಡಿದ್ದರು.

# ಶಾಲೆಯಲ್ಲಿ ಹಸಿರೇ ಉಸಿರು ಅಭಿಯಾನ



**ಕಡರನಾಯಕಹಳ್ಳಿ**

ಮಲೇಬೆನ್ನೂರು, ಆ.6- ಕಡರನಾಯಕಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹರಿಹರದ ಶ್ರೀ ಮಹಾ ತಪಸ್ವಿ ಸೇವಾ ಪ್ರತಿಷ್ಠಾನದ ವತಿಯಿಂದ 'ಹಸಿರೇ ಉಸಿರು' ಎಂಬ ಅಭಿಯಾನವನ್ನು ಆಯೋಜಿಸಲಾಗಿತ್ತು.

ಶಾಲಾ ಮೇಲುಸ್ತುವಾರಿ ಸಮಿತಿಯ ಉಪಾಧ್ಯಕ್ಷಿಣಿಯಾದ ಶ್ರೀಮತಿ ಸವಿತಾ ರವಿಕುಮಾರ್, ಗ್ರಾ.ಪಂ. ಸದಸ್ಯ ಲೋಕಪ್ಪ ಅವರು ಗಿಡ ನೆಡುವ ಮೂಲಕ 'ಹಸಿರೇ ಉಸಿರು' ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಮಹಾ ತಪಸ್ವಿ ಸೇವಾ ಪ್ರತಿಷ್ಠಾನದ ರಾಜ್ಯಾಧ್ಯಕ್ಷರಾದ ಶ್ರೀಮತಿ ಕೆ.ಸಿ.ಶಾಂತಕುಮಾರಿ ಅವರು, ಪ್ರತಿಷ್ಠಾನದ ಮಹಾ ಪೋಷಕರಾದ ಶ್ರೀ ಅವಧೂತ ಕವಿಗುರುರಾಜ ಗುರೂಜಿ ಅವರ ಸಂಕಲ್ಪದಂತೆ ಜೀವಿಸುವಂತ ಪ್ರಾಣಿ, ಪಕ್ಷಿ, ಜಲ - ಚರ ಮತ್ತು ಮನು ಕುಲಕ್ಕೂ ಈ ಪರಿಸರದ ನಂಟು ಇಲ್ಲದೆ ಇದ್ದರೆ ಬದುಕಲು ಸಾಧ್ಯವಿಲ್ಲ, ಎನ್ನುವ ದೂರ ದೃಷ್ಟಿಯಿಂದ ಮಳೆಗಾಲದ ಅವಧಿಯಲ್ಲಿ ಇಂಥ ಅಭಿಯಾನಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಬಹಳಷ್ಟು ಕಾಡು ನಶಿಸಿ ಹೋಗುತ್ತಿದ್ದು, ಇತ್ತೀಚಿಗೆ ಉಸಿರಾಟದ ತೊಂದರೆಗೆ ಬಹಳಷ್ಟು ಜನ ಕಂಗಾಲಾಗುತ್ತಿದ್ದಾರೆ. ಮುಂದಿನ ಪೀಳಿಗೆಗೆ ಕಾಡು ಸಂರಕ್ಷಣೆ ಬಗ್ಗೆ ಅರಿವನ್ನು ಮೂಡಿಸುವ ಕೆಲಸ ಆಗಬೇಕಿದೆ. ಇದಕ್ಕೆ ಸರ್ಕಾರ ಹೆಚ್ಚು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಿದೆ ಎನ್ನುತ್ತಾ 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಶಾಲಾ ಆವರಣದಲ್ಲಿ ನೆಟ್ಟಂತ ಸಸಿಗಳ ಸಂರಕ್ಷಣೆಯನ್ನು ವಿದ್ಯಾರ್ಥಿಗಳು ಕಾಪಾಡುವ ಮೂಲಕ ಪರಿಸರ ಉಳಿಸುವಲ್ಲಿ ಅವರ ಮುಂದಿನ ಭವಿಷ್ಯಕ್ಕೆ ನಾಂದಿ ಆಗಲಿ ಎಂದು ಶಾಂತಕುಮಾರಿ ಹೇಳಿದರು.

ಶಾಲೆಯ ಮುಖ್ಯೋಪಧ್ಯಾಯರಾದ ಮಂಜಪ್ಪ, ಸಹ ಶಿಕ್ಷಕರಾದ ಕುಬೇರಪ್ಪ, ಆರೋಗ್ಯ ಇಲಾಖೆಯ ಸಂತೋಷ್ ಕುಮಾರ್, ಚೇತನ, ಪ್ರತಿಷ್ಠಾನದ ಸಂಪರ್ಕ ಅಧಿಕಾರಿ ಶ್ರೀಮತಿ, ಸುನೀತಾ ಧನರಾಜ್, ಎಸ್‌ಡಿಎಂಸಿ ಸದಸ್ಯರಾದ ಧನರಾಜ್, ಭರತ್, ನಾಗರಾಜ್, ಅಂಬುಜಮ್ಮ, ನಾಗರತ್ನಮ್ಮ, ಮಮತಾ , ಹನುಮಂತ ಹಾಗೂ ಇತರರು ಪಾಲ್ಗೊಂಡಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೊಟ್ಟೂರೇಶ್ವರ ಬಡಾವಣೆ, ಶ್ರೀರಾಮ್ ಬಡಾವಣೆ, ಡಿ.ಸಿ.ಎಂ ಟೌನ್‌ಶಿಪ್, ಜಯನಗರ 'ಬಿ' ಬ್ಲಾಕ್, ಶಕ್ತಿ ನಗರ, ರೆಡ್ಡಿ ಬಿಲ್ಡಿಂಗ್, ಸನ್‌ರೈಸ್ ಅಪಾರ್ಟ್‌ಮೆಂಟ್, ಶೇಖರಪ್ಪ ಗೋಡೌನ್ ರಸ್ತೆ, ಅಂಬಿಕಾ ನಗರ, ಭೂಮಿಕ ನಗರ, ಧರ್ಮಸ್ಥಳ ಬಿಲ್ಡಿಂಗ್, ಹೈಟೆಕ್ ಲೇಔಟ್, ಹೈಟೆಕ್ ರಸ್ತೆ ಎಡಭಾಗದ ಪ್ರದೇಶಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಪಿ.ಬಿ. ರಸ್ತೆ, ಸಶಾಮ್ ಲೇಔಟ್, ಮನೋಮಿ ಲೇಔಟ್, ಗಣೇಶ ಲೇಔಟ್, ಆನಂದ ರೆಸಿಡೆನ್ಸಿ, ಕೆ. ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್, ಬೃಂದಾವನ ರಸ್ತೆ, ದಿಬ್ಬದಹಳ್ಳಿ ಕಾಂಪೌಂಡ್, ಬಿಲಾಲ್ ಕಾಪೌಂಡ್, ಲಾಯರ್ ರಸ್ತೆ, ಆಹಾರ್ 2000, ಪುಷ್ಪಾಂಜಲಿ ಏರಿಯಾ ಹಾಗೂ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ಗಮಕ ಶ್ರಾವಣ ಕಾರ್ಯಕ್ರಮ

ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಆಂಗ್ಲಮಾಧ್ಯಮ ಶಾಲೆ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಲಯನ್ಸ್ ಭವನದಲ್ಲಿ 'ಗಮಕ ಶ್ರಾವಣ' ಕಾರ್ಯಕ್ರಮ ನಡೆಯಲಿದೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ ಅಧ್ಯಕ್ಷತೆ ವಹಿಸಲಿದ್ದು, ಗಮಕ ಕೇಸರಿ ಹರಿಹರದ ಸುಜಾತ ಗೋಪಿನಾಥ್ ಗಮಕ ವಾಚನ ಮಾಡುವರು. ಶಿವಮೊಗ್ಗದ ಎಂ.ಎಸ್. ವಿನಾಯಕ ಗಮಕ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲಯನ್ಸ್ ಶಾಲೆ ಛೇರ್ಮನ್ ಆರ್.ಜಿ. ಶ್ರೀನಿವಾಸಮೂರ್ತಿ, ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಖಜಾಂಚಿ ವೈ.ಬಿ. ಸತೀಶ್ ಭಾಗವಹಿಸಲಿದ್ದಾರೆ.

## ಜಿಲ್ಲಾ ನೇಕಾರ ಒಕ್ಕೂಟದ ನಗರದಲ್ಲಿ ಇಂದು ಕೈಮಗ್ಗ ದಿನಾಚರಣೆ

ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ವತಿಯಿಂದ ಇಂದು ಜಿಲ್ಲಾಧಿಕಾರಿ ಕಚೇರಿ ಪಕ್ಕದ ಜಿಲ್ಲಾ ನೇಕಾರರ ಸಮುದಾಯ ಭವನದಲ್ಲಿ 10 ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ನಡೆಯಲಿದೆ. ಒಕ್ಕೂಟದ ಅಧ್ಯಕ್ಷ ಎಸ್.ಕೆ. ಬಸವರಾಜ್ ಅಧ್ಯಕ್ಷತೆ ವಹಿಸುವರು.

## ಜೀವ, ಆರೋಗ್ಯ ವಿಮೆ ಕಂತುಗಳ ಜಿಎಸ್ಟಿ ರದ್ದತಿಗೆ ಪ್ರತಿಭಟನೆ

ನವದೆಹಲಿ, ಆ. 6 - ಜೀವ ಹಾಗೂ ಆರೋಗ್ಯ ವಿಮೆಗಳ ಕಂತಿನ ಮೇಲೆ ಶೇ.18ರಷ್ಟು ಜಿ.ಎಸ್.ಟಿ. ವಿಧಿಸುವುದನ್ನು ವಾಪಸ್ ಪಡೆಯಬೇಕು ಎಂದು ಐ.ಎನ್.ಡಿ.ಐ.ಎ. ಮೈತ್ರಿಕೂಟದ ಪಕ್ಷಗಳು ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿವೆ.

ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್, ಆಮ್ ಆದ್ಮಿ ಪಾರ್ಟಿ ಹಾಗೂ ಎನ್.ಸಿ.ಪಿ. (ಎಸ್.ಸಿ.) ಸೇರಿದಂತೆ ಹಲವು ಪಕ್ಷಗಳ ಸಂಸದರು ಸಂಸತ್ತಿನ ಮಕರ ದ್ವಾರದ ಮೆಟ್ಟಿಲುಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿದ್ದಾರೆ.

ಜಿಎಸ್.ಟಿ. ವಾಪಸ್ ಪಡೆಯಬೇಕು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದರು.

## ಚಂದ್ರಶೇಖರ್‌ಗೆ ಪಿ.ಹೆಚ್.ಡಿ. ಪದವಿ



ದಾವಣಗೆರೆ, ಆ. 6- ರಾಣೇಬೆನ್ನೂರಿನ ಬಿಎಜೆಎಸ್‌ಎಸ್ ಮಹಿಳಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಚಂದ್ರಶೇಖರ್ ಎಂ.ಕೆ. ಅವರಿಗೆ ದಾವಣಗೆರೆ ವಿಶ್ವವಿದ್ಯಾನಿಲಯವು ಪಿಹೆಚ್‌ಡಿ ಪದವಿ ನೀಡಿದೆ.

ದಾವಣಗೆರೆ ವಿವಿಯ ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ವೆಂಕಟರಾವ್ ಎಂ.ಪಲಾಟೆ ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಡಾ. ಅಶೋಕ್ ಕುಮಾರ್ ವಿ. ಪಾಳೇದ್ ಅವರ ಮಾರ್ಗದರ್ಶನದಲ್ಲಿ ಚಂದ್ರಶೇಖರ್ ಅವರು ಮಂಡಿಸಿದ್ದ 'ಎ ಹಿಸ್ಟಾರಿಕಲ್ ಸ್ಟಡಿ ಆಫ್ ಬ್ಯಾಕ್ವರ್ಡ್ ಕ್ಲಾಸಸ್ ಮುವ್ಮೆಂಟ್ ಇನ್ ಕರ್ನಾಟಕ : ಚಾಲೆಂಜಸ್ ಅಂಡ್ ಇಂಪ್ಯಾಕ್ಟ್' ಎಂಬ ಮಹಾಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ನೀಡಿದೆ.

## ಓದುಗರ ಪತ್ರ



### ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ

ಮಾನ್ಯರೇ,

2-3 ವರ್ಷಗಳಿಂದ ನಗರದ ಎಲ್ಲಾ ಬಡಾವಣೆಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದರಿಂದ ಕೆಲಸಕ್ಕೆ ತೆರಳಿದ ನಾಗರಿಕರು ರಾತ್ರಿ ವೇಳೆ ಮನೆಗೆ ಹೋಗಲು ಆತಂಕ ಪಡುವಂತಾಗಿದೆ. ವೃದ್ಧರು, ವಾಹನ ಸವಾರರು ಹಾಗೂ ಮಕ್ಕಳಿಗೆ ತೀವ್ರತರ ತೊಂದರೆ ಉಂಟಾಗುತ್ತಿದ್ದು, ಈ ಕುರಿತು ಪತ್ರಿಕೆಯ ಓದುಗರ ಪತ್ರದ ಮೂಲಕ ಸಾಕಷ್ಟು ಸಲ ಸಂಬಂಧಿಸಿದ ಅಧಿಕಾರಿಗಳನ್ನು ಎಚ್ಚರಿಸಿದರೂ ಕುರುಡರಂತೆ ವರ್ತಿಸುವುದು ವಿಪರ್ಯಾಸ.ಸಾರ್ವಜನಿಕರ ಹಿತ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆ ಆಯುಕ್ತರು, ಪಾಲಿಕೆ ಸದಸ್ಯರು ಮತ್ತು ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆ ಪರಿಹರಿಸಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

- ಐಗೂರು ಪ್ರಭು, ದಾವಣಗೆರೆ.

# ಗ್ರಾಮೀಣ ವೈದ್ಯರ ಸೇವೆ ಸ್ಫೂರ್ತಿದಾಯಕ

## ಜೆಜೆಎಂ ಮೆಡಿಕಲ್ ಕಾಲೇಜಿನಲ್ಲಿ ಸ್ಫೂರ್ತಿದಾಯಕ ವೈದ್ಯರ ದಿನಾಚರಣೆ



ದಾವಣಗೆರೆ, ಆ.5- ಜೆಜೆಎಂ ಮೆಡಿಕಲ್ ಕಾಲೇಜಿನ ಅಕಾಡೆಮಿಕ್ ಬಾಡಿ ಆಯೋಜಿಸಿದ್ದ ವೈದ್ಯರ ದಿನಾಚರಣೆಯು ಅರ್ಥಪೂರ್ಣವಾಗಿತ್ತು.

ಗ್ರಾಮಾಂತರ ಪ್ರದೇಶದಲ್ಲಿ ಎರಡು - ಮೂರು ದಶಕಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಮೂವರು ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾದ ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕ ಡಾ. ಸಂಪನ್ನ ಮುತಾಲಿಕ್ ಅವರು ಸನ್ಮಾನಿತರನ್ನು ಪ್ರಶಂಸಿಸುತ್ತಾ, ಇಂತಹ ನಿಸ್ವಾರ್ಥ ಸೇವೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಸೀಮಿತ ಸೌಕರ್ಯಗಳ ಮಧ್ಯದಲ್ಲಿ ಎಷ್ಟೋ ಜೀವಗಳನ್ನು ಉಳಿಸಿ, ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯವನ್ನು ಕಾಪಾಡಲು ಶ್ರಮಿಸುತ್ತಿರುವ ಇವರುಗಳ ಜೀವನ ಎಲ್ಲಾ ವೈದ್ಯರುಗಳಿಗೆ ಸ್ಫೂರ್ತಿದಾಯಕವಾಗಬೇಕು. ಇಂತಹ ಸಮಾಜಮುಖಿ ವೈದ್ಯರನ್ನು ಕರೆತಂದು, ಈ ದಿನ ಸನ್ಮಾನಿಸುತ್ತಿರುವ ಮೆಡಿಕಲ್ ಕಾಲೇಜಿನ ಕಾಳಜಿ ಮೆಚ್ಚುವಂತದ್ದು ಎಂದರು.

30ಕ್ಕೂ ಹೆಚ್ಚು ವರ್ಷಗಳಿಂದ ಕ್ಯಾತನಕೆರೆ ಗ್ರಾಮದಲ್ಲಿ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿರುವ ಡಾ.ಚಂದ್ರಪ್ಪ ಅವರು ಸನ್ಮಾನವನ್ನು ಸ್ವೀಕರಿಸಿದ ನಂತರ ಮಾತನಾಡುತ್ತಾ, ತಮ್ಮ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಏರುಪೇರುಗಳು ಇದ್ದರೂ ವೈದ್ಯನಾಗಬೇಕು ಎಂಬ ಛಲದಿಂದ ಉತ್ತಮ ಅಂಕ ಪಡೆದು, ಸಿಇಟಿಯಲ್ಲಿ ಉತ್ತಮ ರಾ ್ಯಂಕ್‌ನೊಂದಿಗೆ ಈ ಜೆಜೆಎಂ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿದೆ. ಇಂದು ಅದೇ ಕಾಲೇಜಿನಲ್ಲಿ ನನ್ನನ್ನು ಗುರುತಿಸಿ ಸನ್ಮಾನಿಸುತ್ತಿರುವುದಕ್ಕೆ ಅತ್ಯಂತ ಸಂತೋಷವಾಗಿದೆ ಎಂದರು.

ಹರಪನಹಳ್ಳಿಯಲ್ಲಿ ಚೇತನ ಕ್ಲಿನಿಕ್ ನಡೆಸುತ್ತಿರುವ ಡಾ.ಮಂಜುನಾಥ್ ಕೆ. ಎಂ ಅವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ವೈದ್ಯರಿಗೆ ಸಂವಹನ ಕೌಶಲ್ಯ ಅತಿ ಮುಖ್ಯ. ಇದರಿಂದ ರೋಗಿಯ ಮನಸ್ಸನ್ನು ಗೆದ್ದು ಅವರು ಬೇಗ ಗುಣಮುಖರಾಗುವಂತೆ ಮಾಡಬಹುದು. ಔಷಧೀಯ ಜೊತೆಗೆ ನಮ್ಮ ಒಳ್ಳೆಯ ಮಾತುಗಳು ರೋಗಿಯನ್ನು ಬೇಗ ಗುಣಮುಖವಾಗುವಂತೆ ಮಾಡುತ್ತದೆ. ಇದನ್ನು ಪ್ರತಿಯೊಬ್ಬ ವೈದ್ಯರು ಅಳವಡಿಸಿಕೊಳ್ಳಬೇಕು ಎಂದರು.

ಮತ್ತೊಬ್ಬ ಸನ್ಮಾನಿತರಾದ ಜಗಳೂರಿನ ಸಿಟಿ ಕ್ಲಿನಿಕ್‌ನ ವೈದ್ಯರಾದ ಡಾ.ಷಣ್ಮುಖಪ್ಪ ಅವರು ಮಾತನಾಡಿ, ನಾವು ಸಂತ್ರಸ್ತರ ಸೇವೆಯ ಬಗ್ಗೆ ಅವರನ್ನು ಆದಷ್ಟು ಬೇಗ ಗುಣ ಮಾಡುವುದರ ಬಗ್ಗೆ ಹೆಚ್ಚು ಗಮನ ಕೊಡಬೇಕೆ ವಿನಃ, ದುಡ್ಡು ಗಳಿಸುವ ಬಗ್ಗೆ ಅಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಸೌಕರ್ಯಗಳಿಲ್ಲದಿದ್ದರೂ ಸಮಯ ಪ್ರಜ್ಞೆಯಿಂದ ನಾವು ಸಾಕಷ್ಟು ಜೀವಗಳನ್ನು ಅನುಭವದಿಂದ ಉಳಿಸಬಹುದು. ನಮ್ಮ ಕೈ ಮೀರಿದ ಸಮಸ್ಯೆಗಳಿಗೆ ಹೆಚ್ಚು ಸಮಯ ವ್ಯರ್ಥ ಮಾಡದೇ ಸೂಕ್ತ ಕ್ರಮಕ್ಕೆ ಅನುವು ಮಾಡಿಕೊಟ್ಟು, ಸಾಕಷ್ಟು ರೋಗಿಗಳನ್ನು ನಾವು ಬದುಕಿಸಿದ್ದೇವೆ. ಅಂತಹ ಸಮಯ ಪ್ರಜ್ಞೆ ವೈದ್ಯರಿಗೆ ಅಗತ್ಯ ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಕ್ಲ ಶೆಟ್ಟಿ ಸ್ವಾಗತಿಸಿದರು. ಡಾ.ಸಂತೋಷ್ ಅವರು ಎಲ್ಲರನ್ನು ವಂದಿಸಿದರು. ವೇದಿಕೆಯ ಮೇಲೆ ಡಾ. ಮೂಗನಗೌಡ ಪಾಟೀಲ್, ಡಾ. ನಾಗಮಣಿ ಅಗರ್‌ವಾಲ್ ಉಪಸ್ಥಿತರಿದ್ದರು. ಡಾ.ಛಾಯಾ ಹಾಗೂ ಡಾ. ನೀತಿ ಕಾರ್ಯಕ್ರಮವನ್ನು ನಿರೂಪಿಸಿದರು.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಪುರಾಣ ಪ್ರವಚನ ಆರಂಭ



ದಾವಣಗೆರೆ,ಆ.6- ಬಾಡಾ ಕ್ರಾಸ್‌ನ ಪುಟ್ಟರಾಜ ನಗರದಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಶ್ರೀ ಗಾನಯೋಗಿ ಶಿವಯೋಗಿ ಪಂಚಾಕ್ಷರಿ ಗವಾಯಿಗಳವರ ಜೀವನ ಚರಿತ್ರೆ ಮಹಾಪುರಾಣವನ್ನು ಆರಂಭಿಸಲಾಯಿತು.

ಉದ್ಘಾಟನೆಯನ್ನು ನೆರವೇರಿಸಿ ಆಶೀರ್ವಚನ ನೀಡಿದ ಆವರಗೊಳ್ಳ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಆಶ್ರಮದಲ್ಲಿ ದಿವ್ಯ ಪುಟ್ಟರಾಜರ ದೀಪಕ್ಕೆ ನಾವುಗಳು ಎಣ್ಣೆ-ಬತ್ತಿ ಇದ್ದಂತೆ, ಆಶ್ರಮದಲ್ಲಿ ನಡೆಯುವ ಸೇವೆಗಳು ಅಚ್ಚುಕಟ್ಟಾಗಿ ನಡೆಯುತ್ತಿವೆ ಎಂದು ಶ್ಲಾಘಿಸಿದರು.

ಆಶ್ರಮದ ಕಾರ್ಯದರ್ಶಿ ಜೆ.ಎನ್. ಕರಿಬಸಪ್ಪ, ನಿರ್ದೇಶಕ ಎ.ಹೆಚ್. ಸಿದ್ದಲಿಂಗಸ್ವಾಮಿ, ಬಸವನಗೌಡ್ರು ಮತ್ತಿತರರು ಹಾಜರಿದ್ದರು.

ಶಿವಬಸವಯ್ಯ ಸ್ವಾಮಿ ಚರಂತಿಮಠ ಅವರು 1 ತಿಂಗಳ ಕಾಲ ಪುರಾಣ ಪ್ರವಚನ ಮಾಡುವರು. ಪ್ರತಿ ಶನಿವಾರ ಮತ್ತು ಭಾನುವಾರ ಮಧ್ಯಾಹ್ನ 1 ರಿಂದ ಹಾಗೂ ಉಳಿದ ದಿನಗಳಲ್ಲಿ ಸಂಜೆ 4-30 ರಿಂದ ಪುರಾಣ ಪ್ರವಚನ ನಡೆಯಲಿದೆ.

**ಖಾಲಿ ನಿವೇಶನ ಕ್ರಯಕ್ಕೆ ಪಡೆಯುವ ಬಗ್ಗೆ**

ಕ್ರಯಕ್ಕೆ ಪಡೆಯುವವರು : ಶ್ರೀಮತಿ ರಾಜೇಶ್ವರಿ ಹತ್ಕೋಲ್ ಲದ್ವಾ ಬೀದಿ ಹರಿಹರ. ಕ್ರಯಕ್ಕೆ ಕೊಡುವವರು ಶ್ರೀಮತಿ ಸುಜಾತ ಎನ್. ಆರ್. 1ನೇ ಮೇನ್, 4ನೇ ಕ್ರಾಸ್, ವಿಜಯನಗರ ಬಡಾವಣೆ, ಹರಿಹರ, ಇವರ ಸ್ವತ್ತು ಖಾಲಿ ನಿವೇಶನ ಅಳತೆ 47x45 ಅಡಿ ನಿರ್ದರಣಾ ಸಂಖ್ಯೆ 1776/3-1678/3-35 /1776-3 ನಾವು ಕ್ರಯಕ್ಕೆ ಪಡೆಯುತ್ತಿದ್ದು, ಸದರಿ ಸ್ವತ್ತಿನ ಬಗ್ಗೆ ಏನಾದರೂ ತಂಟೆ ತಕರಾರು ಇದ್ದಲ್ಲಿ ಸಂಪರ್ಕಿಸಿ.

ಮೊ. : 70195 50522

# ಮಹಲಿಂಗರಂಗ ಕ್ಷೇತ್ರದ ಅಭಿವೃದ್ಧಿಗೆ ನೆರವು

## ಎಸ್. ಮಲ್ಲಿಕಾರ್ಜುನಪ್ಪ ಅವರ ಕೃತಿ ಲೋಕಾರ್ಪಣೆಯಲ್ಲಿ ಶಾಸಕ ದೇವೇಂದ್ರಪ್ಪ



ಜಗಳೂರು, ಆ.6- ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಕೊಣಚಗಲ್ ಶ್ರೀ ರಂಗನಾಥ ಸ್ವಾಮಿ ಕ್ಷೇತ್ರದ ತಪ್ಪಲಿನಲ್ಲಿರುವ 17ನೇ ಶತಮಾನದ ಅನುಭಾವ ಕವಿ ಮಹಲಿಂಗರಂಗ ಸಮಾಧಿ ಸೇರಿದಂತೆ, ಕೊಣಚಗಲ್ ಬೆಟ್ಟವನ್ನು ಪ್ರವಾಸೋದ್ಯಮ ಕ್ಷೇತ್ರವನ್ನಾಗಿಸಲು ಅಗತ್ಯ ನೆರವು ನೀಡುವುದಾಗಿ ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ತಾಲ್ಲೂಕಿನ ಕೊಣಚಗಲ್ ಬೆಟ್ಟದ ತಪ್ಪಲಿನಲ್ಲಿ ಮಂಗಳವಾರ ಹಿರಿಯ ಸಾಹಿತಿ ಎಸ್. ಮಲ್ಲಿಕಾರ್ಜುನಪ್ಪ ಬರೆದಿರುವ ಅನುಭಾವಾಮೃತ ಕೃತಿಯ ಅಮರ ಕನ್ನಡ ಕವಿ ಮಹಲಿಂಗರಂಗ ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸಾಹಿತಿ ಮಲ್ಲಿಕಾರ್ಜುನಪ್ಪ ಅವರು, 17ನೇ ಶತಮಾನದ ಅನುಭಾವ ಕವಿ ಮಹಲಿಂಗರಂಗರು ಕನ್ನಡ ಭಾಷೆಗೆ ಕೊಟ್ಟ ಕೊಡುಗೆಯನ್ನು ತಿಳಿಸಿದ್ದಾರೆ. ಅವರ ಸಮಾಧಿ ಅನ್ವೇಷಣೆ ಮಾಡಿ 5 ಕೃತಿಗಳನ್ನು ಸಂಶೋಧ ನಾತ್ಮಕವಾಗಿ ಹೊರತಂದಿದ್ದಾರೆ ಎಂದು ಶ್ಲಾಘಿಸಿದರು.

ಸಮಾಧಿ ಸ್ಥಳ ಅಭಿವೃದ್ಧಿಗಾಗಿ ಒಂದು ಸಮಿತಿ ರಚಿಸಿ, ಅಲ್ಲಿ ಕೈ ಗೊಳ್ಳಬೇಕಾದ ಕೆಲಸಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿ ಮನವಿ ಸಲ್ಲಿಸಿದರೆ, ಅಭಿವೃದ್ಧಿ ಮಾಡಲು ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ಪುಸ್ತಕ ಕುರಿತು ವಿಶ್ರಾಂತ ಪ್ರಾಚಾರ್ಯ ಡಾ.ಎಲ್.ಎಂ. ಪ್ರಭಾಕರ್ ಲಕ್ಕೊಳ್ ಮಾತನಾಡಿ, ಹಿರಿಯ ಸಾಹಿತಿ ಎಸ್.ಮಲ್ಲಿಕಾರ್ಜುನಪ್ಪ ಹೊರ ತಂದಿರುವ ಕೃತಿ ನಿಜಕ್ಕೂ ವಾಸ್ತವಾಂಶವನ್ನು ಪ್ರತಿಪಾದಿಸುತ್ತದೆ ಎಂದರು. ಮಹಲಿಂಗರಂಗ ಕನ್ನಡದ ಶ್ರೇಷ್ಠ ಕವಿ. ಮಹಲಿಂಗರಂಗರ ಇತಿಹಾಸ ತಿರುಚುವವರಿಗೆ ಈ ಪುಸ್ತಕ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಂತಿದೆ. ಮಹಲಿಂಗರಂಗರ ಸಮಾಧಿ ವಿವಾದ ಮತ್ತು ಜನ್ಮ ಸ್ಥಳ ಕುರಿತು ಇರುವ ಗೊಂದಲ, ಶೈವ ಸಂಸ್ಕೃತಿ ಮತ್ತು ಕನ್ನಡದಲ್ಲಿ ಮಹಲಿಂಗರಂಗರು ಬರೆದ ಪದ್ಯಗಳ ಕುರಿತು ದಾಖಲೆ ಸಹಿತ ಉತ್ತರಿಸಿದ್ದಾರೆ ಎಂದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ಈ ನೆಲದ ಸಂಸ್ಕೃತಿಯ ಮಹಲಿಂಗರಂಗರು ಐಕ್ಯವಾಗಿರುವ ಈ ಜಾಗ ನಿಜಕ್ಕೂ ಪಾವನ. ವಿದ್ಯಾರ್ಥಿಗಳು ಈ ಸೊಬಗನ್ನು ಸವಿಯಬೇಕು.

ಕೃತಿಯ ಲೇಖಕ, ಹಿರಿಯ ಸಾಹಿತಿ ಎಸ್. ಮಲ್ಲಿಕಾರ್ಜುನಪ್ಪ ಮಾತನಾಡಿ, ನಾಗರೀಕತೆ ಬೆಳೆದಂತೆ ಸಂಸ್ಕೃತಿ, ಸಂಸ್ಕಾರ ನಾಶವಾಗುತ್ತದೆ. ನಮ್ಮ ಈ ನೆಲದ ಕನ್ನಡದ ಅನುಭಾವ ಕವಿ ಮಹಲಿಂಗರಂಗರು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು. ಮಹಲಿಂಗರಂಗರ ಜನ್ಮಸ್ಥಳ ವಿವಾದ ಮತ್ತು ಸಮಾಧಿ ಸ್ಥಳ ವಿವಾದ ಬಗೆಹರಿಸುವ ಪ್ರಯತ್ನವನ್ನು ಈ ಕೃತಿಯ ಮೂಲಕ ಮಾಡಿದ್ದೇನೆ ಎಂದರು.

ಹಿರಿಯ ಸಾಹಿತಿ ಎನ್.ಟಿ.ಎರ್ರಿಸ್ವಾಮಿ, ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಎಚ್.ಎಸ್. ಮಂಜುನಾಥ್ ಕುರ್ಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಡಿ.ಡಿ ರವಿಚಂದ್ರ, ಎಚ್.ಎಲ್.ಹಾಲೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ, ಗುತ್ತಿದುರ್ಗ ಗ್ರಾಪಂ ಅಧ್ಯಕ್ಷ ಮಾನಸ ಲಿಂಗರಾಜ್, ಸಾಹಿತಿ ಡಾ.ರಾಜಪ್ಪ ನಿಬಗೂರು, ಡಿ.ಸಿ.ಮಲ್ಲಿಕಾರ್ಜುನ್, ಮಹಲಿಂಗರಂಗ ವೇದಿಕೆ ಹಜರತ್ ಅಲಿ, ಎಸ್.ಎಂ. ಸೋಮನಗೌಡ ಇತರರಿದ್ದರು.

## ಪ್ಲಾಸ್ಟಿಕ್ ಧ್ವಜಗಳು ನಿಷೇಧ

ದಾವಣಗೆರೆ, ಆ. 6 - ಆಗಸ್ಟ್ 15 ರಂದು ಆಚರಿಸಲಿರುವ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಪ್ಲಾಸ್ಟಿಕ್ ಧ್ವಜ ಮಾರಾಟ ಮತ್ತು ಉಪಯೋಗಿಸದಂತೆ ಪರಿಸರ ಅಧಿಕಾರಿ ಡಾ.ಹೆಚ್. ಲಕ್ಷ್ಮಿಕಾಂತ ತಿಳಿಸಿದ್ದಾರೆ.

ರಾಷ್ಟ್ರ ಧ್ವಜವನ್ನು ಕೈಯಿಂದ ನೂಲುವ ಮತ್ತು ಕೈಯಿಂದ ನೇಯ್ದ ಅಥವಾ ಯಂತ್ರದಿಂದ ಮಾಡಿರುವ ಹಾಗೂ ಹತ್ತಿ ಪಾಲಿಸ್ಟರ್, ಉಣ್ಣೆ, ರೇಷ್ಮೆ ಖಾದಿಯಿಂದ ಮಾಡಿರುವ ಧ್ವಜಗಳನ್ನು ಬಳಸಬಹುದು. ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವಂತಹ ಅಂಗಡಿ ಮಾಲೀಕರುಗಳ ವಿರುದ್ದ ಪ್ಲಾಸ್ಟಿಕ್ ಹಾಗೂ ಪರಿಸರ ಸಂರಕ್ಷಣಾ ಕಾಯ್ದೆ ಯಡಿಯಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

## ನಾಳೆ ಹೈನುಗಾರಿಕೆ ತರಬೇತಿ

ದಾವಣಗೆರೆ, ಆ. 6 - ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿಯು ನಾಡಿದ್ದು ದಿನಾಂಕ 8 ಮತ್ತು 9 ರಂದು ನಡೆಯಲಿದೆ. ಸಂಪರ್ಕಿಸಿ : 08192-233787.

## ಢಾಕಾ ಕಚೇರಿಗಳಲ್ಲಿ ಭೀತಿ ವಾತಾವರಣ

ಢಾಕಾ, ಆ. 6 - ಬಾಂಗ್ಲಾದೇಶದ ಸರ್ಕಾರಿ ಕಚೇರಿ ಗಳು ಮಂಗಳವಾರ ತೆರೆದಿದ್ದವಾದರೂ ಆಗಮಿಸಿದ ಅಧಿ ಕಾರಿಗಳಲ್ಲಿ ಭೀತಿ ಹಾಗೂ ಉದ್ವಿಗ್ನತೆ ಕಂಡುಬಂದಿತು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಶೇಖ್ ಹಸೀನಾ ಅವರು ಪ್ರಧಾನ ಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿ ದೇಶದಿಂದ ಪಲಾಯನ ಮಾಡಿದ ನಂತರ ಅನಿಶ್ಚಿತತೆ ಉಂಟಾಗಿದೆ. ಸಚಿವಾಲಯಗಳಿಗೆ ಬಂದ ಅಧಿಕಾರಿಗಳ ಸಂಖ್ಯೆ ಕಡಿಮೆ ಇತ್ತು. ಸಚಿವರು ಹಾಗೂ ಜನಪ್ರತಿನಿಧಿಗಳು ಗೈರಾಗಿದ್ದರು. ಕಚೇರಿಗಳಿಗೆ ಬಂದವರಲ್ಲಿ ಹೆದರಿಕೆ ಹಾಗೂ ಆತಂಕ ಇತ್ತು ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ. ಅವಾಮಿ ಲೀಗ್ ಪಕ್ಷವು ಬಂಗಬಂಧು ಅವಿನ್ಯೂದಲ್ಲಿ ಹೊಂದಿದ್ದ ಕೇಂದ್ರ ಕಚೇರಿಗೆ ಸೋಮವಾರ ರಾತ್ರಿ ಬೆಂಕಿ ಹಚ್ಚಲಾಗಿತ್ತು. ಈ ಕಚೇರಿ ಸಚಿವಾಲಯಕ್ಕೆ ಅತ್ಯಂತ ಸಮೀಪದಲ್ಲಿದೆ.


## ಜಪಾನ್‌ನ ನಿಕ್ಕಿ ಮಾರುಕಟ್ಟೆ ಚೇತರಿಕೆ

ನ್ಯೂಯಾರ್ಕ್, ಆ. 6 - ಜಪಾನ್‌ನ ಷೇರುಪೇಟೆಯಾದ ನಿಕ್ಕಿ 225 ಸೂಚ್ಯಂಕ ಮಂಗಳವಾರದಂದು ಶೇ.10ರ ಏರಿಕೆ ಕಂಡಿದೆ. ಸೋಮವಾರದಂದು ಜಪಾನ್ ಷೇರುಪೇಟೆ ಶೇ.12ರ ಭಾರೀ ಕುಸಿತ ಕಂಡ ನಂತರ, ಇಡೀ ವಿಶ್ವದ ಷೇರುಪೇಟೆಗಳಲ್ಲಿ ಹಿನ್ನಡೆಯಾಗಿತ್ತು. ಮಂಗಳವಾರದಂದು ನಿಕ್ಕಿ ಶೇ.11ರ ಏರಿಕೆ ಕಂಡಿತಾದರೂ, ನಂತರ ಶೇ.10.23 ಹಂತಕ್ಕೆ ಸೀಮಿತವಾಯಿತು. ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಭೀತಿ ಉಂಟಾಗಿರುವುದು ಷೇರುಪೇಟೆಯಲ್ಲಿ ಕುಸಿತಕ್ಕೆ ಕಾರಣವಾಗಿತ್ತು.









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas